ಕೆನರಾ
ವೆಲ್‌ಫೇರ್ ಟ್ರಸ್ಟ್
सा विद्या या विमुक्तये

# ಆಡಳಿತಾಧಿಕಾರಿ ವರದಿ 2013–2014




**ಟ್ರಸ್ಟಿನ ಸಂಸ್ಥೆಗಳ, ಧರ್ಮದರ್ಶಿಗಳ, ಮೆನೇಜಿಂಗ್ ಕಮಿಟಿ ಸದಸ್ಯರ,**
**ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಪ್ರಥಮ ಸಹಾಯಕರ ಮತ್ತು ಕಾರ್ಯಾಲಯ**
**ಮುಖ್ಯಸ್ಥರ ಸಂಯುಕ್ತ ವಾರ್ಷಿಕ ಸಭೆ**

**19 ಜುಲೈ 2014**

# ಪರಿವಿಡಿ


| ವಿಷಯ | ಪುಟ ಸಂ. |
|---|---|
| 1. ಸ್ವಾಗತ ಹಾಗೂ ಉಪೋದ್ಘಾತ | 03–06 |
| 2. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ | 06–07 |
| 3. ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನದ ಕುರಿತು | 07–10 |
| 4. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ | 11–13 |
| 5. ಶೈಕ್ಷಣಿಕ ಪ್ರಗತಿ: 2013–14ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ | 14–17 |
| 6. 2013–14ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ / ಅಧ್ಯಾಪಕರ ವಿಶೇಷ ಸಾಧನೆ | 18–20 |
| 7. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು | 21 |
| 8. ಶಿಕ್ಷಕೇತರ ಹುದ್ದೆಗೆ ನೇಮಕಾತಿ ಮಾಡಿದ ಕುರಿತು | 22 |
| 9. ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು | 23–25 |
| 10. ಕ್ರುಗರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ | 26–27 |
| 11. 'ಜನರಲ್ ವೆಲ್‌ಫೆರ್ ಫಂಡ್' ನಿಂದ ನೀಡಿದ ಸಹಾಯಧನ | 27 |
| 12. 2013–14ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ ಇತ್ಯಾದಿಗಳ ವಿವರ | 28–30 |
| 13. Financial Assistance for Education - ಶಿಕ್ಷಣಕ್ಕಾಗಿ ಆರ್ಥಿಕ ನೆರವ | 31–32 |
| 14. Mobile Health Care Project – ಆರೋಗ್ಯ ತಪಾಸಣೆ ಮತ್ತು ಔಷದೋಪಚಾರ ಶಿಬಿರ | 32–34 |
| 15. P.S.Kamat Memorial District Level Inter-Collegiate Debate Competition - ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ | 35–37 |
| 16. Project Change Makers for a Better Tomorrow - ಉತ್ತಮ ನಾಳೆಗಾಗಿ ಪರಿವರ್ತನಾಗಾರರು | 37–39 |
| 17. ಇಂಡಿಯನ್ ಸಿವಿಲ್ ಸರ್ವಿಸ್ ಮತ್ತು ಸ್ಪರ್ದಾತ್ಮಕ ಪರೀಕ್ಷೆ ಕುರಿತು ಕಾರ್ಯಗಾರ ಮತ್ತು ಉಪನ್ಯಾಸ ಮಾಲಿಕೆ | 40–41 |
| 18. ದಿ.ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ | 41 |
| 19. ಟ್ರಸ್ಟಿಗೆ ಬರುವ ಆದಾಯದ ಕುರಿತು | 42–45 |
| 20. 01–04–2013 ರಿಂದ 30–06–2014 ರವರೆಗೆ ನಿವೃತ್ತಿ ಹೊಂದಿದ ಸಿಬ್ಬಂದಿಗಳು | 45–48 |
| 21. ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ | 49–50 |
| 22. ಪ್ರಗತಿ ಪರಿಶೀಲನಾ ತಂಡದ ಸಲಹೆಗಳು | 50 |
| 23. ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ | 51–52 |
| 24. ಸಾಮಾನ್ಯ ಸೂಚನೆಗಳು | 53 |
| 25. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ | 54–56 |
| 26. ಟ್ರಸ್ಟು ನಡೆಸುತ್ತಿರುವ ಸಂಸ್ಥೆಗಳ ಯಾದಿ | 57 |

# ಆಡಳಿತಾಧಿಕಾರಿ ವರದಿ – 2013–2014

## 1. ಸ್ವಾಗತ ಹಾಗೂ ಉಪೋದ್ಘಾತ

ಕೆನರಾ ವೆಲ್‌ಫೇರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಉಪನ್ಯಾಸಕರ / ಹಿರಿಯ ಶಿಕ್ಷಕರ, ಆಫೀಸ್ ಸಿಬ್ಬಂದಿಯವರ, ಮೆನೆಜಿಂಗ ಕಮಿಟಿಯ ಸದಸ್ಯರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ ವಾರ್ಷಿಕ ಸಭೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರ ಸಲಹೆಯಂತೆ ಇಂದು ದಿನಾಂಕ 19–07–2014 ರಂದು ಗೋಖಲೆ ಸೆಂಟಿನರಿ ಕಾಲೇಜಿನ Audio Visual ಹಾಲಿನಲ್ಲಿ ಕರೆಯಲಾಗಿದೆ.

ಕಳೆದ 31 ವರ್ಷಗಳಿಂದ ಸಂಸ್ಥೆಯ ಮುಖ್ಯಸ್ಥರ ಸಭೆಯನ್ನು ಟ್ರಸ್ಟು ನಡೆಸಿಕೊಂಡು ಬಂದಿದೆ. ಈ ಸಭೆಯಲ್ಲಿ ಕೈಗೊಳ್ಳುವ ಪ್ರತಿಯೊಂದು ನಿರ್ಣಯಗಳ ಪ್ರಯೋಜನ ಎಲ್ಲ ಸಂಸ್ಥೆಗಳಿಗೆ ಲಭಿಸಿ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಮೂಡಿಬರಬೇಕು ಹಾಗೂ ಎಲ್ಲ ಸಂಸ್ಥೆಗಳಲ್ಲಿ ಪ್ರಾಮಾಣಿಕತೆ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕೆನ್ನುವದು ಅಧ್ಯಕ್ಷರ ಪ್ರಾಮಾಣಿಕ ಅನಿಸಿಕೆ ಹಾಗೂ ಕಳಕಳಿಯಾಗಿದೆ. ಇದನ್ನು ಕಾರ್ಯರೂಪಕ್ಕೆ ತರುವದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಇಂದಿನ ಈ ಸಭೆಗೆ ಆಗಮಿಸಿದ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರಿಗೆ ಹಾಗೂ ಮೆನೇಜಿಂಗ್ ಕಮಿಟಿ ಸದಸ್ಯರಿಗೆ, ಸಂಸ್ಥೆಗಳ ಎಲ್ಲ ಮುಖ್ಯಸ್ಥರಿಗೆ, ಹಿರಿಯ ಉಪನ್ಯಾಸಕರಿಗೆ, ಹಿರಿಯ ಸಹ ಶಿಕ್ಷಕರಿಗೆ, ಆಫೀಸ ಸಹಾಯಕರಿಗೆ, ಆಮಂತ್ರಿತರಿಗೆ ಟ್ರಸ್ಟಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇಂದಿನ ಸಭೆ ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಬಹಳ ಮಹತ್ವಪೂರ್ಣವಾದುದು. ಈ ಸಭೆಯಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಪ್ರಗತಿ ಪರಿಶೀಲನೆ, ಸಾಧನೆ, ಲೆಕ್ಕಪತ್ರ ನಿರ್ವಹಣೆ, ಅಭಿವೃದ್ಧಿ ಕಾರ್ಯಗಳು ಮತ್ತು ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಮಾಡಿದ ಸಾಧನೆ ಕುರಿತು ವಿವರವಾಗಿ ಚರ್ಚಿಸಲಾಗುವದು ಹಾಗೂ ಇದರ ಜೊತೆಗೆ 2014–2015ನೇ ಸಾಲಿನ ಕಾರ್ಯಯೋಜನೆ ಕುರಿತು ಮುಕ್ತವಾಗಿ ಚರ್ಚಿಸಲಾಗುವದು. ಚರ್ಚೆಯ ಕೊನೆಯಲ್ಲಿ ಅಧ್ಯಕ್ಷರು ಕೈಗೊಳ್ಳುವ ಮಹತ್ವದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಎಲ್ಲರ ಮೇಲಿದೆ.

ಕಳೆದ ವರ್ಷ 27-07-2013 ರಂದು ನಡೆದ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಉಲ್ಲೇಖಿಸಿದ ಕೆಲವು ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ ನಮ್ಮ ಬಹುಕಾಲದ ಕನಸು. ಒಬ್ಬ ವ್ಯಕ್ತಿ ಶಿಕ್ಷಣ ಪಡೆದು ಸ್ವಂತಕ್ಕೆ ಬೆಳಗುವದನ್ನು ನಾವು ಇಷ್ಟಪಡುತ್ತೇವೆ. ಆದರೆ ನಮ್ಮೊಳಗಿನ ಬೆಳಕು ಎಲ್ಲರನ್ನು ಬೆಳಗಿಸಬೇಕು. ಇಡೀ ಸಮಾಜವನ್ನೆ ಬೆಳಕಿನೆಡೆಗೆ ಕೊಂಡಯ್ಯಬೇಕು. ಇದೇ ಸಾಮಾಜಿಕ ಪರಿವರ್ತನೆ. ಮುಂಬರುವ ದಿನಗಳಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಿಗೆ "Qualitative Change" ಗುಣಾತ್ಮಕ ಬದಲಾವಣೆ ಅಗತ್ಯವಾಗಿ ಬೇಕಾಗಿದೆ. ನಮ್ಮ ಮುಂದಿರುವ ಪ್ರತಿಯೊಂದು ಗಳಿಗೆಯೂ ಅತ್ಯಂತ ಅಮೂಲ್ಯವಾದದ್ದು. ಅದರ ಸಂಪೂರ್ಣ ಸದುಪಯೋಗ ಮಾಡಿಕೊಳ್ಳುವ ಎಚ್ಚರ ನಮ್ಮಲ್ಲಿರಬೇಕು. ನಮ್ಮ ನಡವಳಿಕೆಗಳ ಬಗ್ಗೆ, ಕಾರ್ಯ ಶೈಲಿಯ ಬಗ್ಗೆ ನಾವು ಸದಾ ಜಾಗೃತರಾಗಿರಬೇಕು. ಪ್ರತಿಯೊಬ್ಬ ಶಿಕ್ಷಕರು ಗುಣಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ. ನೀವೆಲ್ಲರೂ ಕೇವಲ ಶಿಕ್ಷಕರಾಗಿರದೆ, ಮೌಲ್ಯಾಧಾರಿತ ಶಿಕ್ಷಣದ ದಾರಿ ದಿಕ್ಕುಗಳು ಹೇಗೆ ಇರಬೇಕು, ಅದನ್ನು ಯಾವ ರೀತಿಯಲ್ಲಿ ಪ್ರಯೋಗಕ್ಕೆ ತರಬೇಕು ಎಂಬುದರ ಕುರಿತು ಗಮನ ಹರಿಸಬೇಕಾಗಿದೆ.

ಡಾ. ದಿನಕರ ದೇಸಾಯಿಯವರು 1953ರಲ್ಲಿ ಪ್ರಾರಂಭಿಸಿದ ಕೆನರಾ ವೆಲ್‌ಫೇರ್ ಟ್ರಸ್ಟು 60 ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿ 61ನೇ ವರ್ಷಕ್ಕೆ ಕಾಲಿಟ್ಟಿದೆ. ಈ 60 ವರ್ಷಗಳ ಸಾಧನೆಯ ಸವಿನೆನಪಿಗೆ ವಜ್ರಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಬೇಕೆಂಬ ಬಗ್ಗೆ ಶ್ರೀಯುತ ವಿಷ್ಣು ನಾಯ್ಕರವರು ಈ ಹಿಂದೆ ಪ್ರಸ್ತಾಪ ಮಾಡಿದ್ದರು. ಇಂದಿನ ಸಭೆಯಲ್ಲಿ ಟ್ರಸ್ಟಿನ ವಜ್ರಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವ ಕುರಿತು ಅಧ್ಯಕ್ಷರು ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಬೇಕಾಗಿ ಹಾಗೂ ವಜ್ರಮಹೋತ್ಸವ ಆಚರಿಸುವ ಬಗ್ಗೆ ಒಂದು ಸಮಿತಿ ರಚಿಸಬೇಕಾಗಿ ವಿನಂತಿಸುತ್ತೇನೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಕುರಿತು ಅಧ್ಯಕ್ಷರು ಇಂದಿನ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಟ್ರಸ್ಟು ನಡೆಸುತ್ತಿರುವ ಈ ವಾರ್ಷಿಕ ಸಭೆ ಶೈಕ್ಷಣಿಕ ದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಸಂಪನ್ಮೂಲ ಕ್ರೋಢಿಕರಿಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿರುತ್ತದೆ. ಆದ್ದರಿಂದ ಸಭೆಗೆ ಆಗಮಿಸಿದ ಎಲ್ಲರೂ ಚರ್ಚೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವ ಅವಶ್ಯಕತೆ ಇದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿ, ಹಾಜರಾತಿ, ಪರೀಕ್ಷಾ ಪರಿಣಾಮ, ಸಿಬ್ಬಂದಿಗಳ ಸಮಗ್ರ ಮಾಹಿತಿ, ಲೆಕ್ಕ ಪತ್ರ ನಿರ್ವಹಣೆ,

ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು online ಮೂಲಕ ಟ್ರಸ್ಟ್ ಆಫೀಸಿನಲ್ಲಿ ಪಡೆಯಲಾಗುತ್ತದೆ. ಈ ಬಗ್ಗೆ ಎಲ್ಲ ಸಂಸ್ಥೆಗಳಿಗೆ ಪ್ರತ್ಯೇಕ email I.D. ಯನ್ನು ನೀಡಿರುವದರಿಂದ ಎಲ್ಲಾ ಸಂಸ್ಥೆಗಳು ಕೇಂದ್ರ ಕಛೇರಿಯಿಂದ ಕೇಳಿದ ಮಾಹಿತಿಗಳನ್ನು ಕೂಡಲೆ email ಮೂಲಕ ಕಳುಹಿಸಲು ಅನುಕೂಲವಾಗಿದೆ.

ಟ್ರಸ್ಟಿನ Website - **www.kwtankola.com** ಕಾರ್ಯ ನಿರ್ವಹಿಸಲು ಪ್ರಾರಂಭಿಸಿದೆ. ಈ Website ಮೂಲಕ ಟ್ರಸ್ಟಿನ ಮಾಹಿತಿಯನ್ನು ಕಾರ್ಯ–ಚಟುವಟಿಕೆಯನ್ನು ಅಂತರಜಾಲದ ಮೂಲಕ ಜಗತ್ತಿನ ಯಾವದೇ ಸ್ಥಳದಿಂದ ವೀಕ್ಷಿಸಿಬಹುದಾಗಿದೆ. ಈ Websiteನಲ್ಲಿ ಕಾಲಕಾಲಕ್ಕೆ ಟ್ರಸ್ಟಿನಲ್ಲಿ ನಡೆಯುವ ಹೊಸಹೊಸ ಯೋಜನೆಗಳ, ಸಾಧನೆಗಳ ಹಾಗೂ ಇನ್ನಿತರ ಮಾಹಿತಿಯನ್ನು ಸೇರಿಸಿ update ಮಾಡಲಾಗುವದು. ಟ್ರಸ್ಟಿನ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿಶೇಷ ಕಾರ್ಯಕ್ರಮ, ಸಾಧನೆ, ಅಭಿವೃದ್ಧಿ ಕಾರ್ಯಗಳಿದ್ದರೆ ಅವುಗಳ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಸಲ್ಲಿಸುತ್ತಿರಬೇಕು. ಎಲ್ಲ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಿ ಕಾರ್ಯ ಪ್ರವೃತ್ತರಾದರೆ ಆಡಳಿತಾತ್ಮಕವಾಗಿ ಹಾಗೂ website update ಮಾಡಲು ತುಂಬಾ ಸಹಕಾರಿಯಾಗುತ್ತದೆ. ಇದುವರೆಗೆ ಟ್ರಸ್ಟಿನಲ್ಲಿ ನಡೆಯುತ್ತಿರುವ ಕಾರ್ಯ ಚಟುವಟಿಕೆಯ ಮಾಹಿತಿ website ನಲ್ಲಿ update ಮಾಡಲಾಗಿದೆ.

Internet ಸೌಲಭ್ಯವಿಲ್ಲದ ಸಂಸ್ಥೆಗಳಾದ ಕಡವಾಡ, ಮುದಗಾ, ಕತಗಾಲ, ಬಾಡ–ಕಾಗಾಲ, ಅನಿಲಗೋಡ, ಮುರ್ಡೇಶ್ವರ ಮತ್ತು ಬೇಡ್ಕಣಿ ಈ ಶಾಲೆಯ ಮುಖ್ಯಾಧ್ಯಾಪಕರು ಕೂಡಲೆ ಇಂಟರನೆಟ ಸೌಲಭ್ಯ ಪಡೆಯಬೇಕು. ಇಂಟರ್‌ನೆಟ್ ಸೌಲಭ್ಯ ಕೂಡಲೆ ಪಡೆಯುವಂತೆ ಸಂಸ್ಥೆಯ ಮುಖ್ಯಸ್ಥರಿಗೆ ಶೈಕ್ಷಣಿಕ ಪರಿಶೀಲನಾ ಸಂದರ್ಭದಲ್ಲಿ ಹಾಗೂ ಪತ್ರದ ಮೂಲಕ ತಿಳಿಸಲಾಗಿದೆ. ಆದರೂ ಕೆಲವು ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿರುವದಿಲ್ಲ. 2014–15ನೇ ಸಾಲಿನಲ್ಲಾದರೂ ಇಂಟರ್ನೇಟ್ ಸೌಲಭ್ಯ ಪಡೆದು ಅದರ ಪ್ರಯೋಜನ ಪಡೆಯಬೇಕು.



2013–2014ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟಿನ ವಿವಿಧ ಶಿಕ್ಷಣ ಸಂಸ್ಥೆಗಳು ನಿರ್ವಹಿಸಿದ ಶೈಕ್ಷಣಿಕ ಕಾರ್ಯ ಚಟುವಟಿಕೆ, ಅಭಿವೃದ್ಧಿ ಕೆಲಸಗಳು, ವಿದ್ಯಾರ್ಥಿಗಳ ಸಾಧನೆ, ಪರೀಕ್ಷಾ ಪರಿಣಾಮ, ಲೆಕ್ಕಪತ್ರ ನಿರ್ವಹಣೆ ಮುಂತಾದ ವಿಷಯಗಳ ಅಂಕಿಸಂಖ್ಯೆಗಳನ್ನೊಳಗೊಂಡ ವರದಿಯನ್ನು ತಮ್ಮ ಮುಂದೆ ಸಾದರ ಪಡಿಸುತ್ತಿದ್ದೇನೆ.

## 2. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ

1. ಟ್ರಸ್ಟಿನ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ ಶಾಲಾ, ಕಾಲೇಜುಗಳಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ ದೊರೆಯುವಂತೆ ಪ್ರಯತ್ನಿಸುವದು, ಶಿಕ್ಷಣದ ಗುಣ ಮಟ್ಟ ಸುಧಾರಿಸುವದರ ಜೊತೆಗೆ ಪಠ್ಯ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಎಲ್ಲ ಮುಲಭೂತ ಸೌಲಭ್ಯ ಒದಗಿಸಿ ಶಿಕ್ಷಣದಲ್ಲಿ ಮಹತ್ವಪೂರ್ಣ ಬದಲಾವಣೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡುವದು.
2. "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸುವದು.
3. ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಹಾಗೂ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವದು.
4. ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದಿಕ್ಕಿನಲ್ಲಿ ಗಮನ ಹರಿಸುವದು.
5. ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಟ್ರಸ್ಟಿನ ಸಂಸ್ಥೆಗಳು ಸಾಕ್ಷರತೆ ಪ್ರಮಾಣ ನೂರಕ್ಕೆ ನೂರರಷ್ಟು ಆಗುವಂತೆ ಸ್ವಯಂಪ್ರೇರಣೆಯಿಂದ ಕಾರ್ಯಯೋಜನೆಗಳನ್ನು ಹಾಕಿಕೊಂಡು ಅದನ್ನು ಜಾರಿಗೆ ತರುವಲ್ಲಿ ಸಂಸ್ಥೆಯ ಸಿಬ್ಬಂದಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ತೊಡಗಿಸಿಕೊಂಡು ಪ್ರಯತ್ನಿಸುವದು.
6. ಸರಕಾರದ ಮಳೆಕೊಯ್ಲು ಯೋಜನೆ, ಸಂಪೂರ್ಣ ನಿರ್ಮಲಗ್ರಾಮ ಯೋಜನೆಗಳಿಗೆ ನಮ್ಮ ಸಂಸ್ಥೆಗಳು ತಮ್ಮ ಭಾಗಗಳಲ್ಲಿ ಕೈಜೋಡಿಸಿ ಅವು ಯಶಸ್ವಿಯಾಗುವಂತೆ ನೋಡಿಕೊಳ್ಳುವದು.
7. ಪ್ರತಿಯೊಂದು ಸಂಸ್ಥೆಯವರು (ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳು ಸೇರಿದಂತೆ) ಕಡ್ಡಾಯವಾಗಿ ಪಾಲಕರ ಸಭೆಯನ್ನು ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರವಾಗಿ, ನಡವಳಿಕೆಯ ವಿಚಾರವಾಗಿ, ಹಾಜರಾತಿಯ ವಿಚಾರವಾಗಿ ಮುಕ್ತವಾಗಿ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವದು ಮತ್ತು ಅವರಿಂದ ಬರುವ ಸಲಹೆ ಸೂಚನೆಗಳಿದ್ದರೆ, ಆಕ್ಷೇಪಗಳಿದ್ದರೆ ಅವನ್ನು ದಾಖಲೆಗೊಳಪಡಿಸಿ ಪರಿಹಾರದ ದಾರಿ ಕಂಡುಕೊಳ್ಳುವದು.

8. ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ, ಪಾಲಕರ ಹಾಗೂ ಸಮಾಜದ ಗೌರವ ಸಂಪಾದಿಸಿಕೊಂಡು ಕಾರ್ಯ ನಿರ್ವಹಿಸುವದು.

ಟ್ರಸ್ಟಿನ ಧ್ಯೇಯ ಹಾಗೂ ಸಾಮಾಜಿಕ ಚಿಂತನೆಗಳ ಕುರಿತು ದಿನಾಂಕ 27–07–2013 ರಂದು ನಡೆದ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ಅಧ್ಯಕ್ಷರು ಚರ್ಚಿಸಿ ಎಲ್ಲ ಸಂಸ್ಥೆಗಳ ಮುಖ್ಯಸ್ಥರು ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವಂತೆ ಪ್ರಯತ್ನಿಸಬೇಕೆಂದು ಸಲಹೆ ನೀಡಿದ್ದರು. ಈ ಸಲಹೆಯನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರಲಾಗಿದೆ ಎನ್ನುವದರ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ತಮ್ಮ ವರದಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

## 3. ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನದ ಕುರಿತು

1. ಟ್ರಸ್ಟು ನಡೆಸುತ್ತಿರುವ ಎಲ್ಲ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷ ಬೋಧನೆ ಮಾಡುವ ಶಿಕ್ಷಕರಿಗೆ ಪರಿಷ್ಕೃತ ಸಿಲೆಬಸ್ಸಿನಂತೆ ಬೋಧನೆ ಮಾಡುವ ಹಾಗೂ ಇಂಗ್ಲೀಷ–ವ್ಯಾಕರಣ ಕಲಿಸುವ ಕೌಶಲ್ಯತೆ (Technique) ಕುರಿತು ಒಂದು ದಿವಸದ ತರಬೇತಿ ಶಿಬಿರ ನಡೆಸುವದು.
2. 2013–14ನೇ ಆರ್ಥಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಶಾಲಾ–ಕಾಲೇಜುಗಳ ಹಳೆಯ ಕಟ್ಟಡಗಳ ದುರಸ್ತಿ ಕಾರ್ಯವನ್ನು ಆದ್ಯತೆಯ ಮೇರೆಗೆ ಮಾಡಿಸುವದು.
3. 'ರೂಫೀ ರಿಝರ್ವ ಫಂಡ' ಖಾತೆಗೆ ಸಂಗ್ರಹಿಸುವ ಹಣವನ್ನು ಪುನರ ನಿಗದಿಗೊಳಿಸಿ ಅದರಂತೆ ಹಣ ಸಂಗ್ರಹಿಸುವದು.
4. ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುವ ಅನುದಾನಿತ ಸಿಬ್ಬಂದಿಗಳು/ಸಂಸ್ಥೆಯ ಮುಖ್ಯಸ್ಥರು ತಮ್ಮ ಶಾಲಾ–ಕಾಲೇಜುಗಳ ವ್ಯಾಪ್ತಿಯಲ್ಲಿಯೇ ಕಟ್ಟುನಿಟ್ಟಾಗಿ ವಾಸಿಸುವದು.
5. ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುವ ಯಾವದೇ ಸಿಬ್ಬಂದಿಗಳು ಪತ್ರಿಕೆಗಳ ವರದಿಗಾರರಾಗಿ/ಪತ್ರಕರ್ತರಾಗಿ ಕಾರ್ಯ ನಿರ್ವಹಿಸುವಂತಿಲ್ಲ. ಆದರೆ ಸಾಹಿತ್ಯಿಕ ಬರಹಗಳಿಗೆ ಯಾವ ನಿರ್ಬಂಧವು ಇರುವದಿಲ್ಲ.
6. ಕಳೆದ ವರ್ಷದಂತೆ ಟ್ರಸ್ಟಿನ ಶಾಲೆಗಳಿಗೆ ಸಾದಿಲ್ವಾರ ವೆಚ್ಚ ನೀಡುವದು.
7. ಟ್ರಸ್ಟಿನ ವಜ್ರಮಹೋತ್ಸವ ಆಚರಣೆ ಸಮಿತಿಯನ್ನು ರಚಿಸುವದು.

## ಅಂಗೀಕರಿಸಿದ ನಿರ್ಣಯ ಅನುಷ್ಠಾನಗೊಳಿಸಿದ ಕುರಿತು ಮಾಹಿತಿ:

1. ಇಂಗ್ಲೀಷ ವಿಷಯದ ಕುರಿತು ಒಂದು ದಿವಸದ ಕಾರ್ಯಾಗಾರವನ್ನು ಸಪ್ಟಂಬರ 4, 2013 ರಂದು ಗೋಖಲೆ ಸೆಂಟಿನರಿ ಕಾಲೇಜ ಅಂಕೋಲಾದಲ್ಲಿ ನಡೆಸಲಾಗಿತ್ತು.







ಗೋಖಲೆ ಸೆಂಟಿನರಿ ಕಾಲೇಜಿನ ಇಂಗ್ಲೀಷ ವಿಭಾಗದ ಮುಖ್ಯಸ್ಥರಾದ ಪ್ರೊ. ರೋಹಿಣಿ ನಾಯಕ ಅವರು ಮುಂಜಾನೆ 10–30ಕ್ಕೆ ಸರಿಯಾಗಿ Academic ಸೆಶನ್ ಪ್ರಾರಂಭಿಸಿ, English Phonetics ವಿಷಯದ ಕುರಿತು LCD Projector ನೊಂದಿಗೆ ಕಾರ್ಯಾಗಾರ ಪ್ರಾರಂಭಿಸಿದರು. ನಂತರ ಜಿ.ಸಿ.ಕಾಲೇಜಿನ ಇಂಗ್ಲೀಷ ಪ್ರಾಧ್ಯಾಪಕರಾದ ಪ್ರೊ.ಪೂರ್ಣಿಮಾ ಗಾಂವಕರ ಅವರು Different Types of Speeches ಕುರಿತು, ಉದಾಹರಣೆ ಸಹಿತವಾಗಿ ವಿವರಿಸಿದರು. ಮಧ್ಯಾಹ್ನದ ಊಟದ ನಂತರ ಡಾ.ಎ.ವಿ.ಬಾಳಿಗಾ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ.ಲೋಕೇಶ ಹೆಗಡೆ ಅವರು Teaching Poetry ಕುರಿತು ಉಪನ್ಯಾಸ ನೀಡಿ ಶಿಬಿರಾರ್ಥಿಗಳೊಂದಿಗೆ Interaction ನಡೆಸಿದರು. ಕೊನೆಯಲ್ಲಿ ಶಿಬಿರಕ್ಕೆ ಆಗಮಿಸಿದ ಇಂಗ್ಲೀಷ ಶಿಕ್ಷಕರು ಹಾಗೂ ಉಪನ್ಯಾಸಕರು ಶಾಲೆ/ಕಾಲೇಜಿನಲ್ಲಿ ಇಂಗ್ಲೀಷ ವಿಷಯ ಬೋಧನೆ ಮಾಡುವಲ್ಲಿ, ವ್ಯಾಕರಣ ಕಲಿಸುವಿಕೆಯಲ್ಲಿ ಹಾಗೂ ಪದ್ಯಗಳನ್ನು ಕಲಿಸುವಲ್ಲಿ ಎದುರಿಸುವ ಅನೇಕ ಸಮಸ್ಯೆ ಕುರಿತು ಚರ್ಚಿಸಿದರು. ಎಲ್ಲ ಸಮಸ್ಯೆಗಳಿಗೆ ಆಗಮಿಸಿದ ವಿಷಯ ತಜ್ಞರು ಪರಿಹಾರವನ್ನು ಹೇಳಿದರು. ಈ ಶಿಬಿರವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಟ್ರಸ್ಟಿನ ಎಲ್ಲ ಹೈಸ್ಕೂಲ ಹಾಗೂ ಜ್ಯೂನಿಯರ ಕಾಲೇಜಿನಲ್ಲಿ ಇಂಗ್ಲೀಷ ಬೋಧನೆ ಮಾಡುವ ಶಿಕ್ಷಕರು ಹಾಗೂ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯಲ್ಲಿ ಇಂಗ್ಲೀಷ ಬೋಧಿಸುವ ಶಿಕ್ಷಕರು ಹಾಜರಿದ್ದರು. ಈ ಕಾರ್ಯಕ್ರಮವನ್ನು ಜಿ.ಸಿ.ಕಾಲೇಜಿನ ಇಂಗ್ಲೀಷ ವಿಭಾಗದವರು ನಡೆಸಿಕೊಟ್ಟರು. ಕಾಲೇಜಿನ ಪ್ರಾಚಾರ್ಯರಾದ ಪ್ರೊ.ವಿ.ಆರ್.ಕಾಮತರವರು ಪೂರ್ಣ ಸಹಕಾರ ನೀಡಿದರು.

2. ಟ್ರಸ್ಟು ನಡೆಸುತ್ತಿರುವ ಶಾಲಾ–ಕಾಲೇಜುಗಳು ಪ್ರಾರಂಭಿಸಿ ಸುಮಾರು 50 ರಿಂದ 60 ವರ್ಷಗಳು ಕಳೆದಿರುವದರಿಂದ ಕಟ್ಟಡಗಳ ದುರಸ್ತಿ ಕಾರ್ಯವನ್ನು 2013–14ನೇ ಸಾಲಿನಲ್ಲಿ ಆದ್ಯತೆ ಮೇರೆಗೆ ಪ್ರಾರಂಭಿಸಲಾಗಿದೆ. 2013–14ನೇ ಸಾಲಿನಲ್ಲಿ ಟ್ರಸ್ಟಿನ ವತಿಯಿಂದ ಕಟ್ಟಡದ ದುರಸ್ತಿ ಕೆಲಸ ಮಾಡಿಸಿದ ವಿವರ ಈ ಕೆಳಗಿನಂತಿದೆ.

**2013–14ನೇ ಸಾಲಿನಲ್ಲಿ ಟ್ರಸ್ಟಿನ ವತಿಯಿಂದ ಶಾಲಾ/ಕಾಲೇಜುಗಳ ಕಟ್ಟಡ ರಿಪೇರಿ ಹಾಗೂ ಮೆಂಟೆನನ್ಸ ಬಗ್ಗೆ ಹಾಗೂ ಅಭಿವೃದ್ಧಿ ಕೆಲಸದ ಬಗ್ಗೆ ನೀಡಿದ ಹಾಗೂ ಖರ್ಚು ಮಾಡಿದ ಹಣದ ವಿವರ:**

| | | |
|---|---|---|
| 1 | ಜನತಾ ವಿದ್ಯಾಲಯ ಬಾಡ–ಕಾಗಾಲ ಶಾಲೆಯ ಕಟ್ಟಡ ರಿಪೇರಿ ಹಾಗೂ ಸೈಕಲ್ ಸ್ಟ್ಯಾಂಡ ದುರಸ್ತಿ ಬಗ್ಗೆ | ರೂ.2,71,148 |
| 2 | ಜನತಾ ವಿದ್ಯಾಲಯ ಕಡವಾಡ ಶಾಲೆಯ ಕಟ್ಟಡ, ಬಾಗಿಲು, ಕಿಡಕಿ ಕದ, ಹಾಲಿನ ರಿಪೇರಿ ಇತ್ಯಾದಿ ಕೆಲಸದ ಬಗ್ಗೆ | ರೂ.1,73,247 |
| 3 | ಜನತಾ ವಿದ್ಯಾಲಯ, ಧಾರೇಶ್ವರ ಶಾಲೆಯ ಶೌಚಾಲಯ ಕಟ್ಟಡಕ್ಕೆ | ರೂ.1,00,000 |
| 4 | ಜನತಾ ವಿದ್ಯಾಲಯ ಕಡತೋಕಾ ಶಾಲೆಯ ಗೋಲ್ಡನ್ ಜ್ಯುಬಿಲಿ ಕಟ್ಟಡಕ್ಕೆ | ರೂ.5,00,000 |
| 5 | ಎಸ್.ಕೆ.ಪಿ.ಹೈಸ್ಕೂಲ್, ಕತಗಾಲ ಶಾಲೆಯ ಬಾವಿ ರಿಪೇರಿ ಬಗ್ಗೆ | ರೂ.30,000 |
| 6 | ಜನತಾ ವಿದ್ಯಾಲಯ ಕಾಸರಕೋಡ ಶಾಲೆಯ ಗೇಟ ಕೂಡ್ರಿಸುವ ಬಗ್ಗೆ | ರೂ.25,000 |
| 7 | ಜನತಾ ವಿದ್ಯಾಲಯ ಮುದಗಾ ಶಾಲೆಯ ಕಟ್ಟಡ ರಿಪೇರಿ ಬಗ್ಗೆ | ರೂ.11,000 |
| 8 | ಜಿ.ಸಿ.ಕಾಲೇಜಿನ ಮೇಲ್ಗಡೆ (ಚೇರಮನ ಕ್ವಾರ್ಟರ್ಸದ ಎದುರಿಗೆ) ಜೆ.ಸಿ.ಬಿ.ಮೂಲಕ ಲೆವೆಲಿಂಗ ಮಾಡಿಸಿದ ಬಗ್ಗೆ | ರೂ.16,925 |
| 9 | ದಿವೇಕರ ಕಾಲೇಜಿನ ಬಾಸ್ಕೇಟ ಬಾಲ ಕೋರ್ಟಿನ ನಿರ್ಮಾಣಕ್ಕೆ | ರೂ.1,00,000 |
| | **ಒಟ್ಟೂ ಖರ್ಚು** | **ರೂ.12,27,320** |

3. ಟ್ರಸ್ಟಿಗೆ ಬರುವ ಪ್ರಮುಖ ಆದಾಯದಲ್ಲಿ ಒಂದಾದ ರೂಫೀ ರಿಸರ್ವ ಫಂಡ ಯೋಜನೆಗೆ ವಿದ್ಯಾರ್ಥಿಗಳು/ಪಾಲಕರು/ಶಿಕ್ಷಕರು ಸ್ವಯಂ ಪ್ರೇರಣೆ ಮೂಲಕ ನೀಡುವ ದೇಣಿಗೆಯನ್ನು ಕಳೆದ ಅನೇಕ ವರ್ಷಗಳಿಂದ ಹೆಚ್ಚಳ ಮಾಡಿದ್ದು ಇರುವದಿಲ್ಲ. ಆದರೆ ಈಗ ರೂಪಾಯಿಯ ಮೌಲ್ಯ ಕುಸಿದಿರುವದರಿಂದ ಹಾಗೂ ಶಾಲಾ/ಕಾಲೇಜುಗಳ ಅಭಿವೃದ್ಧಿ ಕೆಲಸಗಳ ಬಗ್ಗೆ/ದುರಸ್ತಿ ಕಾರ್ಯದ ಬಗ್ಗೆ ಬೇಡಿಕೆ ಹೆಚ್ಚಾಗಿರುವದರಿಂದ ಈಗ ಸಂಗ್ರಹಿಸುತ್ತಿರುವ ಹಣ ಏನೇನು ಸಾಲುತ್ತಿಲ್ಲ. ಟ್ರಸ್ಟಿನ ಬೆಳವಣಿಗೆಯಲ್ಲಿ ಸಿಬ್ಬಂದಿಗಳೂ ಸೇರಿದಂತೆ ಎಲ್ಲರ ಪಾತ್ರ ಇರಬೇಕೆಂದು ಟ್ರಸ್ಟು ಬಯಸುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಎಲ್ಲರ ಸಮ್ಮತಿ ಮೇರೆಗೆ "ರೂಫೀ ರಿಸರ್ವ ಫಂಡ" ಯೋಜನೆ ಮೂಲಕ ಸ್ವಯಂ ಪ್ರೇರಣೆ ದೇಣಿಗೆಯಾಗಿ ಸಂಗ್ರಹಿಸುವ ಹಣವನ್ನು ಪುನರ್ ನಿಗದಿಪಡಿಸಿದ್ದರು. ಅದೇ ರೀತಿ 2013–14ನೇ ಸಾಲಿನಲ್ಲಿ ಟ್ರಸ್ಟಿನ ಎಲ್ಲಾ ಶಾಲಾ ಕಾಲೇಜುಗಳ ಅಧ್ಯಾಪಕರು ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಸಂಗ್ರಹಿಸಿ ಟ್ರಸ್ಟಿಗೆ ನೀಡಿರುತ್ತಾರೆ.

| | |
|---|---|
| 2012–13ನೇ ಸಾಲಿನಲ್ಲಿ ರೂಪೀ ರಿಸರ್ವ ಫಂಡ ಮೂಲಕ ಸಂಗ್ರಹಿಸಿದ ದೇಣಿಗೆ | ರೂ.9,57,250 |
| 2013–14ನೇ ಸಾಲಿನಲ್ಲಿ ಪುನರ ನಿಗದಿಪಡಿಸಿದಂತೆ ಸ್ವಯಂಪ್ರೇರಣೆಯಿಂದ ಸಂಗ್ರಹಿಸಿದ ದೇಣಿಗೆ | ರೂ.19,25,700 |

ರೂಫೀ ರಿಸರ್ವ ಫಂಡ ಯೋಜನೆ ಮೂಲಕ ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಿದ ಹಾಗೂ ಸಂಗ್ರಹಿಸಿದ ಎಲ್ಲ ಪ್ರಾಚಾರ್ಯರಿಗೆ/ಮುಖ್ಯಾಧ್ಯಾಪಕರಿಗೆ/ಅಧ್ಯಾಪಕರಿಗೆ/ಶಿಕ್ಷಕೇತರ ಸಿಬ್ಬಂದಿಯವರಿಗೆ ಹಾಗೂ ವಿದ್ಯಾರ್ಥಿಗಳಿಗೆ ಹಾಗೂ ಇನ್ನಿತರ ದಾನಿಗಳಿಗೆ ಅಧ್ಯಕ್ಷರ ಪರವಾಗಿ ಟ್ರಸ್ಟಿನ ಪರವಾಗಿ ಹಾರ್ದಿಕ ಧನ್ಯವಾದಗಳು. ಈ ಯೋಜನೆ ನಿರಂತರವಾಗಿ ನಡೆಯಲು ತಮ್ಮೆಲ್ಲರ ಸಹಕಾರ ಎಂದಿನಂತೆ ಇರಲಿ ಎಂದು ಹಾರೈಸುತ್ತೇನೆ.

4. ಟ್ರಸ್ಟು ನೀಡಿದ ಸೂಚನೆಯಂತೆ ಈ ವರ್ಷ ಶಾಲಾ–ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುವ ಯಾವದೇ ಸಿಬ್ಬಂದಿಗಳು ವರದಿಗಾರರಾಗಿ / ಪತ್ರಕರ್ತರಾಗಿ ಕಾರ್ಯ ನಿರ್ವಹಿಸುತ್ತಿಲ್ಲ.
5. ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುವ ಪ್ರಾಚಾರ್ಯರು, ಮುಖ್ಯಾಧ್ಯಾಪಕರು, ಅಧ್ಯಾಪಕರು ಮತ್ತು ಇತರೇ ಸಿಬ್ಬಂದಿಗಳು ಅವರು ಕಾರ್ಯ ನಿರ್ವಹಿಸುವ ಶಾಲಾ–ಕಾಲೇಜುಗಳ ವ್ಯಾಪ್ತಿ ಪ್ರದೇಶದಲ್ಲಿ ವಾಸ ಮಾಡುವಂತೆ ತಿಳಿಸಲಾಗಿತ್ತು. ಬಹುತೇಕ ಸಿಬ್ಬಂದಿಗಳು ವ್ಯಾಪ್ತಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಇದುವರೆಗೆ ವ್ಯಾಪ್ತಿ ಪ್ರದೇಶದಲ್ಲಿ ವಾಸ ಮಾಡದಿದ್ದವರು ತಕ್ಷಣದಿಂದ ವಾಸ ಮಾಡುವಂತೆ ಈ ಮೂಲಕ ತಿಳಿಸಲಾಗಿದೆ.
6. ವಾರ್ಷಿಕ ಸಭೆಯಲ್ಲಿ ನಿರ್ಣಯಿಸಿದಂತೆ ಈ ಹಿಂದಿನಂತೆ ಹೈಸ್ಕೂಲ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಾದಿಲ್ವರ ವೆಚ್ಚಕ್ಕಾಗಿ ರೂ.7500/–ರಂತೆ ಒಟ್ಟೂ ರೂ.1,05,000/– ಪಾವತಿಸಲಾಗಿದೆ.
7. ಟ್ರಸ್ಟಿನ ವಜ್ರಮಹೋತ್ಸವವನ್ನು ವಿಧಾಯಕ ಅಭಿವೃದ್ಧಿ ಕಾರ್ಯಗಳನ್ನು ಆಧರಿಸಿ ಆಚರಿಸಬೇಕೆಂಬ ನಿರ್ಣಯ ಕಳೆದ ವರ್ಷ ಅಂಗೀಕರಿಸಲಾಗಿತ್ತು. ಈ ಬಗ್ಗೆ ವಜ್ರ ಮಹೋತ್ಸವ ಆಚರಣೆ ಸಮಿತಿಯನ್ನು ರಚಿಸುವಂತೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸುತ್ತೇನೆ.
8. ದಿವೇಕರ ವಾಣಿಜ್ಯ ಮಹಾವಿದ್ಯಾಲಯದ ಆವಾರದಲ್ಲಿ ಟ್ರಸ್ಟು Post Graduate Commerce Centreನ್ನು ಪ್ರಾರಂಭಿಸಲು ನಿರ್ಣಯಿಸಿ, ಸರ್ಕಾರದಿಂದ ಹಾಗೂ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದು 2014–15ನೇ ಸಾಲಿಗೆ PG Centre ಪ್ರಾರಂಭಿಸಿ ಪ್ರವೇಶ ಪ್ರಕ್ರಿಯೆ ಪ್ರಾರಂಭಗೊಂಡಿದೆ. ಈ ಕೋರ್ಸು ಪ್ರಾರಂಭಿಸಲು ಪ್ರೇರಣೆ ನೀಡಿದ ಸಂಸ್ಥೆಯ ಅಧ್ಯಕ್ಷರಿಗೂ ಹಾಗೂ PG Centre ಪ್ರಾರಂಭಿಸಲು ಶ್ರಮಿಸಿದ ಪ್ರಾಚಾರ್ಯರಾದ ಡಾ. ಎಂ.ಎಚ್.ನಾಯ್ಕರಿಗೂ ಅಭಿನಂದನೆ ಸಲ್ಲಿಸುತ್ತೇನೆ.

ಕಳೆದ ವರ್ಷ ಅಂಗೀಕರಿಸಿದ ನಿರ್ಣಯದಂತೆ ಎಲ್ಲಾ ಕಾರ್ಯಗಳನ್ನು ಎಲ್ಲರ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಸಲಾಗಿದೆ.

## 4. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ

2013–2014ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.

### INSTITUTIONAL STRENGTH - ACADEMIC YEAR 2013-2014


| SI | NAME OF THE INSTITUTION | Student Strength | | | Total No. of Employees | | | | |
|---|---|---|---|---|---|---|---|---|---|
| | | | | | Aided Employees | | Appointed by Mgt. | | |
| | | Boys | Girls | Total | Teach-ers | Non-Teach | Teach-ers | Non-Teach | Total |
| | **DEGREE COLLEGES** | | | | | | | | |
| 1. | Gokhale Centenary College, Ankola | 127 | 228 | 355 | 24 | 6 | 10 | 11 | 51 |
| 2. | Divekar College Of Commerce, Karwar | 120 | 195 | 315 | 9 | 6 | 4 | 7 | 26 |
| 3. | KWT's College of Education, Dandeli | 15 | 65 | 80 | - | - | 7 | 3 | 10 |
| 4. | B.C.A. College, Karwar | 12 | 52 | 64 | - | - | 6 | 2 | 8 |
| | **Total** | **274** | **540** | **814** | **33** | **12** | **27** | **23** | **95** |
| | **JUNIOR COLLEGES** | | | | | | | | |
| 5. | Gokhale Centenary P.U. College, Ankola | 105 | 101 | 206 | - | 1 | 15 | 8 | 24 |
| 6. | Divekar P.U. Commerce College, Karwar | 106 | 78 | 184 | - | - | 6 | 2 | 8 |
| 7. | J.V.Comp. Jr. College, Dandeli | 115 | 134 | 249 | 8 | 6 | 1 | 1 | 16 |
| 8. | J.V.Comp. Jr. College, Kadtoka | 60 | 54 | 114 | 8 | 2 | 2 | 1 | 13 |
| 9. | J.V.Comp. Jr. College, Shirali, Bhatkal | 182 | 308 | 490 | 6 | - | 6 | 4 | 16 |
| 10. | P.M. Comp. Jr. College, Ankola | 88 | 56 | 144 | 6 | 1 | - | 2 | 9 |
| 11. | Divekar P.U. Science College, Karwar | 34 | 10 | 44 | - | - | 8 | 5 | 13 |
| | **Total** | **690** | **741** | **1431** | **28** | **10** | **38** | **23** | **99** |
| | **HIGH SCHOOLS** | | | | | | | | |
| 12. | P.M. High School, Ankola | 270 | 209 | 479 | 14 | 3 | 4 | 3 | 24 |
| 13. | P.M. High School (Engl. Med.), Ankola | 66 | 84 | 150 | - | - | 3 | 2 | 5 |
| 14. | Janata Vidyalaya, Baad-Kagal | 124 | 128 | 252 | 9 | - | 1 | 4 | 14 |
| 15. | Janata Vidyalaya, Shirali | 132 | 96 | 228 | 7 | 2 | 2 | 3 | 14 |
| 16. | Janata Vidyalaya, Dandeli | 556 | 428 | 984 | 24 | - | 2 | 7 | 33 |
| 17. | Janata Vidyalaya, Kadwad | 64 | 34 | 98 | 6 | 1 | 1 | 1 | 9 |
| 18. | Janata Vidyalaya, Kasarkod | 98 | 102 | 200 | 7 | - | 1 | 2 | 10 |
| 19. | Janata Vidyalaya, Murdeshwar | 259 | 203 | 462 | 6 | - | 7 | 3 | 16 |
| 20. | Janata Vidyalaya, Mirjan-Kodkani | 183 | 199 | 382 | 10 | - | 1 | 1 | 12 |
| 21. | Janata Vidyalaya, Kadtoka | 125 | 98 | 223 | 9 | - | 2 | 2 | 13 |
| 22. | Janata Vidyalaya, Mudga | 62 | 63 | 125 | 6 | 1 | 1 | 2 | 10 |
| 23. | Janata Vidyalaya, Dhareshwar | 76 | 72 | 148 | 8 | 2 | - | - | 10 |
| 24. | Janata Vidyalaya, Bedkani | 78 | 82 | 160 | 6 | - | 2 | 1 | 9 |
| 25. | Smt. Kamalabai Pikale High School, Katgal | 153 | 113 | 266 | 6 | - | 3 | 2 | 11 |
| 26. | Janata Vidyalaya, Anilgod | 56 | 60 | 116 | 7 | 1 | - | 1 | 9 |
| 27. | Janata Vidyalaya, Kulve-Baroor | 54 | 60 | 114 | 9 | 2 | 2 | 1 | 14 |
| | **Total** | **2356** | **2031** | **4387** | **134** | **12** | **32** | **35** | **213** |


| | | | | | | | | | |
|---|---|---|---|---|---|---|---|---|---|
| | **PRIMARY AND PRE-PRIMARY SCHOOLS** | | | | | | | | |
| 28. | English Medium Primary School, Dandeli | 650 | 512 | 1162 | 7 | - | 15 | 2 | 24 |
| 29. | Kannada Medium Primary School, Dandeli | 236 | 207 | 443 | - | - | 8 | 2 | 10 |
| 30. | Dr. Dinkar Desai Memorial Primary School, Ankola | 274 | 216 | 490 | - | - | 11 | 2 | 13 |
| 31. | Dinkar Primary School, Dhareshwar | 134 | 106 | 240 | - | - | 12 | 1 | 13 |
| 32. | Balamandir, Shirali | 87 | 59 | 146 | - | - | 5 | 2 | 7 |
| 33. | English Medium Nursery School, Dandeli | 169 | 132 | 301 | - | - | 4 | 3 | 7 |
| 34. | Kannada Medium Nursery School, Dandeli | 50 | 57 | 107 | - | - | 2 | 1 | 3 |
| 35. | Thakkar Bapa Nursery School, Ankola | 80 | 113 | 193 | - | - | 3 | 1 | 4 |
| 36. | Dinkar Pre-Primary School, Dhareshwar | 47 | 28 | 75 | - | - | - | - | 0 |
| 37. | Anandashrama Balavikasa Kendra, Mundgod | 7 | 8 | 15 | - | - | 2 | - | 2 |
| | **Total** | **1734** | **1438** | **3172** | **7** | **0** | **62** | **14** | **83** |
| | **OTHER SOCIAL SERVICE INSTITUTIONS** | | | | | | | | |
| 38. | Thakkar Bapa Tailoring School, Ankola | - | 15 | 15 | - | - | 1 | - | 1 |
| 39. | Tailoring School, Mundgod | - | 12 | 12 | - | - | 1 | - | 1 |
| 40. | Dinkar Kalaniketan Music School, Ankola | | 21 | 21 | - | - | 1 | - | 1 |
| 41. | Dinkar Kalaniketan Music School, Karwar | 5 | 17 | 22 | - | - | | - | |
| 42. | Satyasai Balavikas Kendra, Kodibag, Karwar | - | - | 0 | - | - | - | - | 0 |
| 43. | Computer Traing Centre, Karwar | 201 | 229 | 430 | - | - | 3 | 1 | 4 |
| 44. | Computer Training Centre, Dandeli | 369 | 288 | 657 | - | - | 2 | 1 | 3 |
| | **Total** | **575** | **582** | **1157** | **0** | **0** | **8** | **2** | **10** |

## ABSTRACT

| Sl | NAME OF THE INSTITUTION | Student Strength | | | Total No. of Employees | | | | |
|---|---|---|---|---|---|---|---|---|---|
| | | | | | Aided Employees | | Appointed by Mgt. | | |
| | | Boys | Girls | Total | Teach-ers | Non-Teach | Teach-ers | Non-Teach | Total |
| 1 | **Degree Colleges** | **274** | **540** | **814** | **33** | **12** | **27** | **23** | **95** |
| 2 | **Junior Colleges** | **690** | **741** | **1431** | **28** | **10** | **38** | **23** | **99** |
| 3 | **High Schools** | **2356** | **2031** | **4387** | **134** | **12** | **32** | **35** | **213** |
| 4 | **Primary & Pre-Primary Schools** | **1734** | **1438** | **3172** | **7** | **0** | **62** | **14** | **83** |
| 5 | **Other Institutions** | **575** | **582** | **1157** | **0** | **0** | **8** | **2** | **10** |
| | **GRAND TOTAL** | **5629** | **5332** | **10961** | **202** | **34** | **167** | **97** | **500** |

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ 10961 ವಿದ್ಯಾರ್ಥಿಗಳು 2013–2014ನೇ ಸಾಲಿನಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿರುತ್ತಾರೆ. ಎಲ್ಲ ಸಂಸ್ಥೆಗಳಲ್ಲಿ ಒಟ್ಟೂ 202 ಅನುಮೋದಿತ ಅಧ್ಯಾಪಕರು, 34 ಅಧ್ಯಾಪಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಹೊರತಾಗಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಪೂರ್ಣಕಾಲಿಕ ಹಾಗೂ ಅರೆಕಾಲಿಕ 167 ಅಧ್ಯಾಪಕರು ಹಾಗೂ 97 ಶಿಕ್ಷಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ **500** ಸಿಬ್ಬಂದಿಗಳು ಹಾಗೂ ಟ್ರಸ್ಟ ಕಾರ್ಯಾಲಯದಲ್ಲಿ **4** ಸಿಬ್ಬಂದಿಗಳು ಸೇರಿ ಒಟ್ಟೂ 504 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.




| | Degree Colleges | Junior Colleges | High Schools | Primary & Pre-Primary Schools | Other Institutions |
|---|---|---|---|---|---|
| Aided Teachers | 33 | 28 | 134 | 7 | 0 |
| Aided Non-Teaching Staff | 12 | 10 | 12 | 0 | 0 |
| Mgt. Appnt. Teachers | 27 | 38 | 32 | 62 | 8 |
| Mgt. Appnt. Non-Teaching | 23 | 23 | 35 | 14 | 2 |
| Total Staff | 95 | 99 | 213 | 83 | 10 |


## 5. ಶೈಕ್ಷಣಿಕ ಪ್ರಗತಿ: 2013–2014ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ

2013–2014ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಪರೀಕ್ಷೆ ಪರಿಣಾಮದ ವಿವರ ಈ ಕೆಳಗಿನಂತೆ ಇದೆ.

### SSLC EXAMINATION HELD IN MARCH / APRIL 2014

| Name of the School | *Previous Year's Result* | Students Appeared | Students Passed | RESULT % |
|---|---|---|---|---|
| **P.M. Eng. Med. High School, Ankola** | - | 46 | 46 | **100.00** |
| **Janata Vidyalaya, Mudga** | *81.13* | 35 | 35 | **100.00** |
| **Janata Vidyalaya, Kadtoka** | *90.00* | 71 | 69 | **97.18** |
| **Janata Vidyalaya Anilgod** | *92.11* | 27 | 26 | **96.30** |
| **Janata Vidyalaya, Bedkani** | *72.22* | 48 | 46 | **95.83** |
| **P.M.High School, Ankola** | *87.70* | 159 | 152 | **95.60** |
| **Janata Vidyalaya, Kulve-Baroor** | *93.33* | 42 | 40 | **95.24** |
| **Janata Vidyalaya, Dhareshwar** | *90.00* | 42 | 40 | **95.24** |
| **Janata Vidyalaya Baad-Kagal** | *90.12* | 83 | 79 | **95.18** |
| **Janata Vidyalaya, Shirali** | *79.52* | 85 | 80 | **94.12** |
| **Janata Vidyalaya. Kasarkod** | *86.84* | 73 | 67 | **91.78** |
| **Janata Vidyalaya, Mirjan** | *80.42* | 117 | 103 | **88.03** |
| **S.K.P.High School, Katgal** | *86.42* | 79 | 69 | **87.34** |
| **Janata Vidyalaya, Kadwad** | *86.84* | 29 | 25 | **86.21** |
| **Janata Vidyalaya, Dandeli** | *70.18* | 320 | 275 | **85.94** |
| **Janata Vidyalaya, Murdeshwar** | *86.14* | 152 | 116 | **76.32** |


2014ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಿ.ಎಮ್.ಆಂಗ್ಲ ಮಾದ್ಯಮ ಪ್ರೌಢಶಾಲೆ ಮತ್ತು ಜನತಾ ವಿದ್ಯಾಲಯ ಮುದಗಾ ಶಾಲೆ 100ಕ್ಕೆ 100 ಫಲಿತಾಂಶ ನೀಡಿರುವದು ಹಾಗೂ ಉಳಿದ 9 ಶಾಲೆಗಳು ಶೇಕಡಾ 90ಕ್ಕಿಂತ ಹೆಚ್ಚು ಫಲಿತಾಂಶ ನೀಡಿರುವದು ಹೆಮ್ಮೆಯ ವಿಷಯ ಅವರೆಲ್ಲರೂ ಅಭಿನಂದನಾರ್ಹರು. ಅದೇ ರೀತಿ ಉಳಿದ 4 ಶಾಲೆಗಳು ಶೇಕಡಾ 85ಕ್ಕಿಂತ ಹೆಚ್ಚು ಫಲಿತಾಂಶ ನೀಡಿದೆ. ಅವರೆಲ್ಲರಿಗೂ ಅಭಿನಂದನೆಗಳು. ನಮ್ಮ ಸಂಸ್ಥೆಗಳಲ್ಲಿ ಕಡಿಮೆ ಅಂದರೆ ಶೇಕಡಾ 76.32ರಷ್ಟು ಫಲಿತಾಂಶ ನೀಡಿದ ಶಾಲೆ ಜನತಾ ವಿದ್ಯಾಲಯ ಮುರ್ಡೇಶ್ವರ. ಈ ಶಾಲೆಗೂ ಅಭಿನಂದಿಸುತ್ತೇನೆ. ಬರುವ ವರ್ಷ ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕರು ಹೆಚ್ಚಿನ ಶ್ರಮ ವಹಿಸಿ ಫಲಿತಾಂಶ ಉತ್ತಮಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಈ ಮೂಲಕ ವಿನಂತಿಸುತ್ತೇನೆ.




## ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

## PU II YEAR EXAMINATION HELD IN APRIL 2014

| Name of the College | Stream | *Previous Year's Result* | Students Appeared | Students Passed | RESULT % |
|---|---|---|---|---|---|
| **J.V.Comp. Jr. College, Shirali** | Commerce | *94.20* | 74 | 72 | **97.30** |
| **J.V.Comp. Jr. College, Shirali** | Arts | *93.51* | 152 | 139 | **91.45** |
| **J.V.Comp. Jr. College, Dandeli** | Commerce | *77.97* | 59 | 51 | **86.44** |
| **G.C.P.U.College, Ankola** | Commerce | *100.00* | 20 | 17 | **85.00** |
| **J.V.Comp. Jr. College, Kadtoka** | Arts | *86.42* | 66 | 53 | **80.30** |
| **G.C.P.U.College, Ankola** | Science | *82.35* | 72 | 56 | **77.78** |
| **J.V.Comp. Jr. College, Dandeli** | Arts | *79.31* | 36 | 27 | **75.00** |
| **P.M.Comp. Jr. College, Ankola** | Arts | *77.50* | 53 | 36 | **67.92** |
| **Divekar P.U. College, Karwar** | Commerce | *72.29* | 82 | 55 | **67.07** |
| **G.C.P.U.College, Ankola** | Arts | *63.64* | 9 | 6 | **66.67** |
| **Divekar P.U. College, Karwar** | Science | *51.61* | 26 | 6 | **23.08** |




ದ್ವಿತೀಯ ಪಿ.ಯು. ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜು ಶಿರಾಲಿ ಶೇಕಡಾ 97.30ರಷ್ಟು ಫಲಿತಾಂಶ ನೀಡಿ ಪ್ರಥಮ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜು, ದಾಂಡೇಲಿ ಶೇಕಡಾ 86.44ರಷ್ಟು ಫಲಿತಾಂಶ ನೀಡಿ ದ್ವಿತೀಯ ಸ್ಥಾನದಲ್ಲಿ ಹಾಗೂ ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜು ಶೇಕಡಾ 85ರಷ್ಟು ಫಲಿತಾಂಶ ನೀಡಿ ತೃತೀಯ ಸ್ಥಾನದಲ್ಲಿದೆ. ಕಲಾ ವಿಭಾಗದಲ್ಲಿ 91.45ರಷ್ಟು ಫಲಿತಾಂಶ ನೀಡಿದ ಪದವಿ ಪೂರ್ವ ಕಾಲೇಜು ಶಿರಾಲಿ ಪ್ರಥಮ ಸ್ಥಾನದಲ್ಲಿದೆ. ಶೇಕಡಾ 80.30ರಷ್ಟು ಫಲಿತಾಂಶ ನೀಡಿದ ಪದವಿ ಪೂರ್ವ ಕಾಲೇಜು ಕಡತೋಕಾ ದ್ವಿತೀಯ ಸ್ಥಾನದಲ್ಲಿ, ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು ದಾಂಡೇಲಿ ಶೇಕಡಾ 75ರಷ್ಟು ಫಲಿತಾಂಶ ನೀಡಿ ತೃತೀಯ ಸ್ಥಾನದಲ್ಲಿದೆ.

ದ್ವೀತೀಯ ಪಿ.ಯು.ಸೈನ್ಸ ಪರೀಕ್ಷೆಯಲ್ಲಿ ಶೇಕಡಾ 77.78ರಷ್ಟು ಫಲಿತಾಂಶ ನೀಡಿ, ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜು ಪ್ರಥಮ ಸ್ಥಾನದಲ್ಲಿದೆ. ಕಲಾ ವಿಭಾಗದಲ್ಲಿ ಪಿ.ಎಮ್. ಪದವಿ ಪೂರ್ವ ಕಾಲೇಜ್, ಅಂಕೋಲಾ ಶೇಕಡಾ 67.92ರಷ್ಟು ಹಾಗೂ ವಾಣಿಜ್ಯ ವಿಭಾಗದಲ್ಲಿ ದಿವೇಕರ ಪದವಿ ಪೂರ್ವ ಕಾಲೇಜ್ 67.07ರಷ್ಟು ಹಾಗೂ ಜಿ.ಸಿ.ಪದವಿ ಪೂರ್ವ ಕಾಲೇಜು ಕಲಾ ವಿಭಾಗದಲ್ಲಿ ಶೇಕಡಾ 66.67ರಷ್ಟು ಫಲಿತಾಂಶ ಪಡೆದು ನಂತರದ ಸ್ಥಾನದಲ್ಲಿದೆ. ದಿವೇಕರ ಪಿ.ಯು.ವಿಜ್ಞಾನ ಕಾಲೇಜು ಮಾತ್ರ ಅತಿ ಕಡಿಮೆ ಅಂದರೆ ಶೇಕಡಾ 23.08ರಷ್ಟು ಪರಿಣಾಮ ನೀಡಿ ಕೊನೆಯ ಸ್ಥಾನದಲ್ಲಿದೆ. ಹಾಗೂ ರಾಜ್ಯ ಮತ್ತು ಜಿಲ್ಲೆಯ ಶೇಕಡಾ ಪ್ರಮಾಣಕ್ಕಿಂತ ಕಡಿಮೆಯಾಗಿರುವದು ನಿರಾಶಾದಾಯಕವಾಗಿದೆ. ಈ ಕಾಲೇಜು ಉತ್ತಮ ಫಲಿತಾಂಶ ನೀಡಲು ಈ ವರ್ಷ ಹೆಚ್ಚು ಕಾಳಜಿಯಿಂದ ಅಧ್ಯಾಪಕರು ಕಾರ್ಯ ನಿರ್ವಹಿಸಬೇಕೆಂದು ವಿನಂತಿಸುತ್ತೇನೆ.


ಉತ್ತಮ ಸಾಧನೆ ಮಾಡಿದ ಎಲ್ಲ ಕಾಲೇಜಿನ ಪ್ರಾಚಾರ್ಯರಿಗೂ, ಅಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ.

2014–15ನೇ ಸಾಲಿನಲ್ಲಿ ಪ್ರಥಮ ಬಾರಿಗೆ 100 ವಿದ್ಯಾರ್ಥಿಗಳು ಟ್ರಸ್ಟು ನಡೆಸುತ್ತಿರುವ ದಾಂಡೇಲಿಯ ಬಿ.ಇಡ್. ಕಾಲೇಜಿನಲ್ಲಿ ಪ್ರವೇಶ ಪಡೆದಿರುತ್ತಾರೆ. ಕಾಲೇಜಿನ ಪ್ರಾಚಾರ್ಯರಿಗೆ ಅಭಿನಂದನೆಗಳು.

## ಪದವಿ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ

## DEGREE EXAMINATION HELD IN MAY / JUNE 2014

| Name of the College | Stream | *Previous Year's Result* | Students appeared | Students passed | RESULT % |
|---|---|---|---|---|---|
| **KWT's BCA College, Karwar** | B.C.A. | *100.00* | **12** | **12** | **100.00** |
| **KWT's B.Ed. College, Dandeli** | B.Ed. | *97.78* | **79** | **77** | **97.47** |
| **Divekar College of Commerce, Karwar** | B.Com. | *96.15* | **88** | **82** | **93.18** |
| **G.C. Degree College, Ankola** | B.A. | *85.71* | **37** | **34** | **91.89** |
| **G.C. Degree College, Ankola** | B.Sc | *90.11* | **56** | **49** | **87.50** |




ಪದವಿ ವಿಭಾಗದ ಬಿ.ಸಿಎ. ಅಂತಿಮ ಪರೀಕ್ಷೆಯಲ್ಲಿ ಟ್ರಸ್ಟಿನ ಬಿ.ಸಿ.ಎ.ಕಾಲೇಜು, ಕಾರವಾರ, ಶೇಕಡಾ 100ರಷ್ಟು ಫಲಿತಾಂಡ ನೀಡಿದೆ. ಬಿ.ಎಡ್.ಕಾಲೇಜು, ದಾಂಡೇಲಿ, ಬಿ.ಎಡ್.ಪದವಿ ಪರೀಕ್ಷೆಯಲ್ಲಿ 97.47ರಷ್ಟು ಫಲಿತಾಂಶ ನೀಡಿದೆ. ವಾಣಿಜ್ಯ ವಿಭಾಗದಲ್ಲಿ (ಬಿ.ಕಾಂ) ಪರೀಕ್ಷೆಯಲ್ಲಿ ದಿವೇಕರ ವಾಣಿಜ್ಯ ಕಾಲೇಜು, ಕಾರವಾರ, 93.18ರಷ್ಟು ಫಲಿತಾಂಶ ನೀಡಿದೆ. ಅಂಕೋಲಾದ ಗೋಖಲೆ ಸೆಂಟಿನರಿ ಪದವಿ ಕಾಲೇಜು ಬಿ.ಎ. ಪರೀಕ್ಷೆಯಲ್ಲಿ ಶೇಕಡಾ 91.89ರಷ್ಟು ಹಾಗೂ ಬಿ.ಎಸ್ಸಿ. ಪರೀಕ್ಷೆಯಲ್ಲಿ ಶೇಕಡಾ 87.50ರಷ್ಟು ಫಲಿತಾಂಶ ನೀಡಿದೆ. ಉತ್ತಮ ಫಲಿತಾಂಶ ನೀಡಿದ ಕಾಲೇಜಿನ ಪ್ರಾಚಾರ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಅಭಿನಂದನಾರ್ಹರು.

ಬರುವ ವರ್ಷ ಇನ್ನೂ ವಿಶೇಷ ಪ್ರಯತ್ನ ಮಾಡಿ ಫಲಿತಾಂಶ ಇನ್ನೂ ಹೆಚ್ಚಾಗುವ ದಿಕ್ಕಿನಲ್ಲಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿ ಕಾರ್ಯ ನಿರ್ವಹಿಸಬೇಕಾಗಿದೆ.

## 6. 2013–14ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ / ಅಧ್ಯಾಪಕರ ವಿಶೇಷ ಸಾಧನೆ

### ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾ

- 2013ರಲ್ಲಿ ಜರುಗಿದ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಸ್ಸಿ. ಅಂತಿಮ ಪರೀಕ್ಷೆಯಲ್ಲಿ ಒಟ್ಟು 10ರಲ್ಲಿ 3 ರ್‍ಯಾಂಕು ಪಡೆದು ಕಾಲೇಜಿಗೆ ಹಾಗೂ ಟ್ರಸ್ಟಿಗೆ ಕೀರ್ತಿ ತಂದಿದ್ದಾರೆ.
    1. ಕುಮಾರಿ ಸುಪ್ರೀಯಾ ಬಾಬು ನಾಯ್ಕ – 2ನೇ ರ್‍ಯಾಂಕ ಪಡೆದು 2 ಗೋಲ್ಡ ಮೇಡಲ್ ಪಡೆದಿರುತ್ತಾಳೆ.
    2. ಕುಮಾರಿ ಸೌಖ್ಯಾರಾಣಿ ಜಿ.ನಾಯಕ – 3ನೇ ರ್‍ಯಾಂಕ ಹಾಗೂ 4 ಗೋಲ್ಡ ಮೇಡಲ್ ಪಡೆದಿರುತ್ತಾಳೆ.
    3. ಕುಮಾರಿ ಮೇಘನಾ ಜಿ.ನಾಯಕ – 10ನೇ ರ್‍ಯಾಂಕ ಪಡೆದಿರುತ್ತಾಳೆ.
- ವಾಲಿಬಾಲ್ ಪಂದ್ಯದಲ್ಲಿ ಇಬ್ಬರು ಯುನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆಯಾಗಿದ್ದಾರೆ.
    1. ಶ್ರೀ ವಿಷ್ಣು ಎಮ್.ನಾಯಕ – ಬಿ.ಎ.1
    2. ಶ್ರೀ ಶರತ ಎಮ್.ನಾಯಕ – ಬಿ.ಎಸ್ಸಿ.2
- Bharat Auto Care, Mangalore ಅವರು ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ 40 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.
- ICICI ಬ್ಯಾಂಕನವರು ನಡೆಸಿದ ಜ್ಯೂನಿಯರ ಸೇಲ್ಸ ಆಫೀಸರ ಹುದ್ದೆಗೆ ಕ್ಯಾಂಪಸ್ ಸಂದರ್ಶನದಲ್ಲಿ ಕಾಲೇಜಿನ 8 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.
- Venus Group of Company, Goa ಅವರು ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ 5 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.
- ಕಾಲೇಜಿನಲ್ಲಿ ಯುಜಿಸಿ ಸಹಯೋಗದೊಂದಿಗೆ ಎರಡು ದಿವಸದ ನ್ಯಾಶನಲ್ ಸೆಮಿನಾರಗಳನ್ನು ಆಯೋಜಿಸಲಾಗಿದೆ – Numerical Analysis & Its Application
- ಕಾಲೇಜಿನಲ್ಲಿ ಯುಜಿಸಿ ಸಹಯೋಗದಿಂದ ಎರಡು Add on course ಗಳನ್ನು ಪ್ರಾರಂಭಿಸಲಾಗಿದೆ.
    1. Beautician & Cosmetology
    2. Web designing

### ಕೆನರಾ ವೆಲ್‌ಫೆರ್ ಟ್ರಸ್ಟ ಬಿ.ಸಿ.ಎ.ಕಾಲೇಜ್, ಕಾರವಾರ

- 2013–14ನೇ ಸಾಲಿನಲ್ಲಿ ಬಿ.ಸಿ.ಎ. ಅಂತಿಮ ವರ್ಷದ 5 ವಿದ್ಯಾರ್ಥಿಗಳು ಕ್ಯಾಂಪಸ್ ಸಿಲೆಕ್ಷನ್ ಮೂಲಕ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ.

  Mphasis ಮೂಲಕ ಆಯ್ಕೆಯಾದವರು

  1. ಕುಮಾರಿ ವೈಶಾಲಿ ನಾಯ್ಕ
  2. ಶ್ರೀ ಫರೀನ್ ಖಾನ
  3. ಕುಮಾರಿ ರೇಹನಾ ಶೇಖ

Wipro ಮೂಲಕ ಆಯ್ಕೆಯಾದವರು

1. ಕುಮಾರಿ ಸುಜ್ಯೋತಿ ನಾಯ್ಕ
2. ಕುಮಾರಿ ರೇನಿತಾ ನರೋನ

## ದಿವೇಕರ ಪದವಿ ಪೂರ್ವ ಕಾಲೇಜು, ಕಾರವಾರ

- 2013–14ನೇ ಸಾಲಿನ 3 ವಿದ್ಯಾರ್ಥಿಗಲು ಪಿ.ಯು.ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದರೆ.
    1. ಕುಮಾರಿ ಅಶ್ವೀನಿ ಅಣ್ವೇಕರ 94.17%
    2. ಕುಮಾರಿ ಅನುಪಮಾ ಭಟ್ಟ 93.00%
    3. ಕುಮಾರಿ ವಾಸವಿ ವಿ.ನಾಯ್ಕ 92.33%

## ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಶಿರಾಲಿ

- ಪೋಲವಾಲ್ಟಿನಲ್ಲಿ ಶ್ರೀ ಮುಕುಂದ ಮಂಜಯ್ಯ ದೇವಾಡಿಗ ಇವರು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಗಳಿಸಿ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ್ದಾರೆ.
- ಕುಮಾರಿ ಪೂರ್ಣಿಮಾ ಜೋಗಿ ಮತ್ತು ಸಂಗಡಿಗರು ರಾಜ್ಯಮಟ್ಟದ ಥ್ರೋಬಾಲ್ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದಿದ್ದರೆ.

## ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ದಾಂಡೇಲಿ

- ಎಸ್.ಎಸ್.ಎಲ್.ಸಿ.ಯಲ್ಲಿ ಇಂಗ್ಲೀಷ/ಕನ್ನಡ ಮಾಧ್ಯಮದಲ್ಲಿ 5 ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡಿದ್ದಾರೆ.
    1. ಶ್ರೀ ಪ್ರೀತಮ ವಿ.ಹಾಲಪ್ಪನವರ 95.04%
    2. ಶ್ರೀ ದೀಪಕ ಬಾಳೆಕುಂದ್ರಿ 93.6%
    3. ಶ್ರೀ ಯೋಗೇಶ ಭಂಡಾರಿ 93.4%
    4. ಶ್ರೀ ಕೇಶವ ಚಂಡಕ 93.4%
    5. ಶ್ರೀ ಶಿವಾಜಿ ಗಣಪತಿ ಚಿಕ್ಕಲ್ಕರ 90.5%

## ಜನತಾ ವಿದ್ಯಾಲಯ, ಕಾಸರಕೋಡ

- ಶ್ರೀ ಮಾರುತಿ ನಾರಾಯಣ ನಾಯ್ಕ ಇವರು ಯೋಗದಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾನೆ.
- ಶ್ರೀ ಪವನ ಅರುಣ ನಾಯ್ಕ ಇವನು ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ 95.84% ಅಂಕ ಪಡೆದಿರುವನು.

## ಜನತಾ ವಿದ್ಯಾಲಯ, ಕಡತೋಕಾ

- ಶ್ರೀ ವಿನಯ ಎಮ್.ಗೌಡ ಇವರು ವಾಲಿಬಾಲ ಪಂದ್ಯದಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿ 4ನೇ ಸ್ಥಾನ ಪಡೆದಿದ್ದಾನೆ.
- ಶ್ರೀ ರೂಪೇಶ ಬಿ.ಥಾಮ್ಸೆ ಇವರು ಸ್ಕೌಟನಲ್ಲಿ ರಾಜ್ಯ ಪುರಸ್ಕಾರ ಪಡೆದಿದ್ದಾನೆ.

## ಎಸ್.ಕೆ.ಪಿ.ಹೈಸ್ಕೂಲ, ಕತಗಾಲ

- ಶ್ರೀ ವಿನಯ ಗೋಪಾಲಕೃಷ್ಣ ದೇಶಭಂಡಾರಿ ಇವರು ವೋಲವಾಲ್ಬನಲ್ಲಿ ರಾಜ್ಯಮಟ್ಟದಲ್ಲಿ ಆಯ್ಕೆಯಾಗಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದ್ದಾರೆ.
- ಶ್ರೀ ಆದಿತ್ಯ ಗೋಪಾಲ ಗೌಡ, ರಾಜ್ಯಮಟ್ಟದ ವಿಕಲಚೇತನ ಮಕ್ಕಳ ಕ್ರೀಡಾಕೂಟದಲ್ಲಿ ಗುಂಡು ಎಸೆತದಲ್ಲಿ ದ್ವಿತೀಯ ಹಾಗೂ ಈಟಿ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ.
- ಕುಮಾರಿ ಜಯಲಕ್ಷ್ಮಿ ಜಟ್ಟು ಗೌಡಾ ಇವರು 3000 ಮಿ. ಓಟದಲ್ಲಿ ರಾಜ್ಯಮಟ್ಟದಲ್ಲಿ ಪ್ರತಿನಿಧಿಸಿದ್ದಾಳೆ.

## ಜನತಾ ವಿದ್ಯಾಲಯ, ಅನಿಲಗೋಡ

- ಅನಿಲಗೋಡ ಶಾಲೆಯು ರಾಜ್ಯಮಟ್ಟದ ವೃತ್ತಿಶಿಕ್ಷಣ ಮತ್ತು ವಸ್ತು ಪ್ರದರ್ಶನದಲ್ಲಿ ಭಾಗವಹಿಸಿರುವರು.

## ಜನತಾ ವಿದ್ಯಾಲಯ, ಕುಳವೆ–ಬರೂರ

- ಕುಮಾರ ಮಹೇಶ ನಾಯ್ಕ ಇವರು ನಡಿಗೆ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ.

## ಕೆಡಬ್ಲೂಟಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ದಾಂಡೇಲಿ

- ಶ್ರೀ ಮೊಹಮ್ಮದ ಶೇಖ ಇವರು ರಾಜ್ಯಮಟ್ಟದ ಗುಂಡು, ಚಕ್ರ ಎಸೆತ ಸ್ಪರ್ದೆಯಲ್ಲಿ ಭಾಗವಹಿಸಿದ್ದಾನೆ.

## ಡಾ.ದಿನಕರ ದೇಸಾಯಿ ಸ್ಮಾರಕ ಪ್ರಾಥಮಿಕ ಶಾಲೆ ಅಂಕೋಲಾ

- ಕರ್ನಾಟಕ ಪ್ರತಿಭಾ ಅಕಾಡೇಮಿ, ಬೆಂಗಳೂರು ಅವರು ಏರ್ಪಡಿಸಿದ ರಾಜ್ಯಮಟ್ಟದ ಸಾಮಾನ್ಯ ಜ್ಞಾನ ಸ್ಪರ್ದೆಯಲ್ಲಿ ಕುಮಾರಿ ಪುಷ್ಪಾ ನಾಗೇಶ ನಾಯಕ ಇವರು ಪ್ರತಿನಿಧಿಸಿದ್ದಾರೆ.

ವಿಶೇಷ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕ ವೃಂದದವರಿಗೆ, ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ.

## 7. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು

2013–14ನೇ ಸಾಲಿನಲ್ಲಿ ನೇಮಕಾತಿ ಹೊಂದಿದ ಅನುದಾನಿತ ಶಿಕ್ಷಕರ ವಿವರ ಈ ಕೆಳಗಿನಂತಿದೆ.

| ಅ.ನಂ. | ಶಿಕ್ಷಕರ ಹೆಸರು | ವಿಷಯ | ನೇಮಕಗೊಂಡ ಶಾಲೆ |
|---|---|---|---|
| 1 | ಶ್ರೀ ಮಗದುಮ್ ಅಲಗೋಡಿ | ಉರ್ದು | ಪಿ.ಎಮ್.ಹೈಸ್ಕೂಲ, ಅಂಕೋಲಾ |
| 2 | ಶ್ರೀಮತಿ ರಂಜನಾ ಬಿ. | ಕಲಾ | ಜನತಾ ವಿದ್ಯಾಲಯ, ಬಾಡ–ಕಾಗಾಲ |
| 3 | ಶ್ರೀಮತಿ ನಿಖಿತಾ ನಾಯ್ಕ | ಪಿ.ಸಿ.ಎಮ್. | ಜನತಾ ವಿದ್ಯಾಲಯ, ಮುದಗಾ |
| 4 | ಶ್ರೀ ಶಿವಾನಂದ ಸವಸುದ್ದಿ | ಇಂಗ್ಲೀಷ | ಪಿ.ಎಮ್.ಹೈಸ್ಕೂಲ, ಅಂಕೋಲಾ |
| 5 | ಶ್ರೀ ವಿಜಯಕುಮಾರ ಬಿ.ಎಮ್. | ಕನ್ನಡ | ಜನತಾ ವಿದ್ಯಾಲಯ, ಕಡವಾಡ |

ಕರ್ನಾಟಕ ಸರಕಾರ 31, ಡಿಸೆಂಬರ 2008ರ ವರೆಗಿನ ಖಾಲಿ ಇರುವ ಹುದ್ದೆಗಳಿಗೆ ಮಾತ್ರ ನೇಮಕಾತಿ ಮಾಡಲು ಅನುಮತಿ ನೀಡಿದ್ದು, ಸರ್ಕಾರದ ಆದೇಶದಂತೆ ಟ್ರಸ್ಟು ನಡೆಸುತ್ತಿರುವ ಎಲ್ಲ ಅನುದಾನಿತ ಶಾಲೆಗಳಲ್ಲಿ 31–12–2008ರ ವರೆಗೆ ಖಾಲಿ ಇರುವ ಹುದ್ದೆಗಳಿಗೆ ಇಲಾಖೆಯಿಂದ ಅನುಮೋದನೆ ಪಡೆದು ನೇಮಕಾತಿ ಮಾಡಲಾಗಿದೆ. ಯಾವದೇ ಹುದ್ದೆ ತುಂಬುವದು ಬಾಕಿ ಇರುವದಿಲ್ಲ. 01–01–2009 ರಿಂದ 30–06–2014ರ ವರೆಗೆ ಒಟ್ಟೂ 08 ಸಹಶಿಕ್ಷಕರ ಹುದ್ದೆ ಖಾಲಿ ಇರುತ್ತದೆ. ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೂಡಲೆ ಅನುಮತಿ ನೀಡುವಂತೆ ಪ್ರಯತ್ನಿಸಬೇಕಾಗಿದೆ.

ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜು ಹಾಗೂ ದಿವೇಕರ ವಾಣಿಜ್ಯ ಪದವಿ ಪೂರ್ವ ಕಾಲೇಜು 2001ರಲ್ಲಿ ಸರ್ಕಾರದ ಆದೇಶದಂತೆ ಸಂಯುಕ್ತ ಕಾಲೇಜುಗಳಿಂದ ಬೇರ್ಪಟ್ಟಿದೆ. ಸರ್ಕಾರ ಇದುವರೆಗೆ ಉಪನ್ಯಾಸಕರ ನೇಮಕಾತಿಗೆ ಅನುಮತಿ ನೀಡಿರುವದಿಲ್ಲ. ಒಟ್ಟು 12 ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡುವಂತೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಲ್ಲಿ 9 ಹುದ್ದೆಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತು 5 ವರ್ಷಗಳು ಕಳೆದರೂ ಇದುವರೆಗೆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಆದೇಶ ನೀಡಿರುವದಿಲ್ಲ. ಈ ಹಿಂದೆ ಆಡಳಿತಾತ್ಮಕ ಅನುಮೋದನೆ ನೀಡಿದ 9 ಹುದ್ದೆಗಳಲ್ಲಿ ಕೇವಲ 4 ಹುದ್ದೆಗಳನ್ನು ತುಂಬಲು ಇಲಾಖೆಯಿಂದ ಸುತ್ತೋಲೆ ಬಂದಿದ್ದು ಅವುಗಳ ಮಾಹಿತಿಯನ್ನು ಇಲಾಖೆಗೆ ಕಳುಹಿಸಿ 2 ವರ್ಷಗಳಾದರೂ ಇನ್ನೂ ಅನುಮತಿ ನೀಡಿರುವದಿಲ್ಲ. ಹುದ್ದೆಗಳನ್ನು ತುಂಬಲು ಅನುಮತಿ ನೀಡುವಲ್ಲಿ ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿರುವದರಿಂದ ಈ ಪದವಿ ಪೂರ್ವ ಕಾಲೇಜುಗಳನ್ನು ನಡೆಸುವದು ಟ್ರಸ್ಟಿಗೆ ಆರ್ಥಿಕವಾಗಿ ಬಹಳ ಸಮಸ್ಯೆಯಾಗಿದೆ. ಇದೇ ರೀತಿ ಸರ್ಕಾರದ ಧೋರಣೆ ಮುಂದುವರೆದರೆ ಪದವಿ ಪೂರ್ವ ಕಾಲೇಜುಗಳನ್ನು ಕೇವಲ ತಾತ್ಕಾಲಿಕ ಉಪನ್ಯಾಸಕರಿಂದ ನಡೆಸಿಕೊಂಡು ಹೋಗುವದು ಮುಂದಿನ ದಿನಗಳಲ್ಲಿ ಟ್ರಸ್ಟಿಗೆ ಒಂದು ಸಮಸ್ಯೆಯಾಗಬಹುದು. ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜಿಗೆ ಕಳೆದ ವರ್ಷ ವೇತನ ನೀಡುವ ಸಲುವಾಗಿ ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಿದ ಒಟ್ಟು ಮೊತ್ತ ರೂ.16,86,906/–

## 8. ಶಿಕ್ಷಕೇತರ ಸಿಬ್ಬಂದಿಗಳ ನೇಮಕಾತಿ ಕುರಿತು:

ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವೃತ್ತಿ ಆಧಾರಿತ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರೌಢಶಾಲಾ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ವಿಲೀನಗೊಳಿಸಿ ಸರ್ಕಾರ ಆದೇಶ ಸಂಖ್ಯೆ ಜಿ12/ಖಾಶಿಅ/ಜೆಓಸಿ/3111-12/3177 ದಿನಾಂಕ 03-02-2014ರಂದು ಹೊರಡಿಸಿರುತ್ತದೆ.

ಈ ಸರ್ಕಾರದ ಆದೇಶದ ಪ್ರಾಕಾರ ಈ ಕೆಳಗೆ ನಮೂದಿಸಿ 8 ಅಭ್ಯರ್ಥಿಗಳನ್ನು ಟ್ರಸ್ಟು ನಡೆಸುತ್ತಿರುವ ವಿವಿಧ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಂತೆ ಟ್ರಸ್ಟು ಆದೇಶ ಹೊರಡಿಸಿದ್ದು ಇರುತ್ತದೆ. ಈ 8 ಜನ ಅಭ್ಯರ್ಥಿಗಳನ್ನು ಸೇವೆಗೆ ಹಾಜರಪಡಿಸಿಕೊಳ್ಳುವ ಪೂರ್ವದಲ್ಲಿ ಮಾನ್ಯ ಅಧ್ಯಕ್ಷರು ಈ 8 ಜನ ಅಭ್ಯರ್ಥಿಗಳ ಸಂದರ್ಶನ ನಡೆಸಿ ಈ ಕೆಳಗಿನಂತೆ ಆದೇಶ ನೀಡಿರುತ್ತಾರೆ.

ವೃತ್ತಿ ಆಧಾರಿತ ಕೋರ್ಸುಗಳಲ್ಲಿ ಬೋಧಕ ಸಿಬ್ಬಂದಿಗಳಾಗಿ ಈ ಅಭ್ಯರ್ಥಿಗಳು ಕಾರ್ಯ ನಿರ್ವಹಿಸಿದ್ದರಿಂದ ಅವರಿಗೆ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸಿದ ಅನುಭವ ಇಲ್ಲದೇ ಇರುವದು ಕಂಡು ಬಂದಿದ್ದರಿಂದ ಈ ಎಲ್ಲ 8 ಅಭ್ಯರ್ಥಿಗಳು ಕೂಡಲೆ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ಬೇಕಾಗುವ ಎಲ್ಲ ಅರ್ಹತೆಗಳನ್ನು ಸಂಪಾದಿಸಿಕೊಳ್ಳಲು ತಿಳಿಸಿ ಅವರನ್ನು 2 ವರ್ಷದ ಪ್ರೊಬೇಶನರಿ ಅವಧಿಗೆ ನೇಮಕ ಮಾಡಲು ಹಾಗೂ ಅವರ ಪ್ರೊಬೇಶನ ಅವಧಿಯಲ್ಲಿ ಅವರ ಸೇವೆ ತೃಪ್ತಿದಾಯಕವಾಗಿರದಿದ್ದಲ್ಲಿ ಅವರ ಸೇವೆಯನ್ನು ವಜಾಗೊಳಿಸುವ ಅಧಿಕಾರವನ್ನು ಆಡಳಿತ ಮಂಡಳಿ ಹೊಂದಿದ ಬಗ್ಗೆ ಅಭ್ಯರ್ಥಿಗಳಿಗೆ ತಿಳಿಸಿ ಅವರ ಒಪ್ಪಿಗೆ ಪಡೆದು ನೇಮಕಾತಿ ಮಾಡಲಾಯಿತು.

| ಅ.ನಂ. | ಅಭ್ಯರ್ಥಿಗಳ ಹೆಸರು | ನೇಮಕಾತಿ ಹೊಂದಿದ ಶಾಲೆಯ ಹೆಸರು |
|---|---|---|
| 1 | **Shri Basavaraj Madiwal** | **Janata Vidyalaya, Murdeshwar** |
| 2 | **Shri Mryutunjay Chakki** | **Smt. Kamalabai Pikale High School, Katgal** |
| 3 | **Shri Shridhar Gudi** | **Janata Vidyalaya, Bedkani** |
| 4 | **Shri Laxman Jagannath Shet** | **Janata Vidyalaya, Dandeli** |
| 5 | **Shri Prabhu Deminakoppa** | **Janata Vidyalaya, Mirjan-Kodkani** |
| 6 | **Smt. Bebi M Bhavankar** | **Janata Vidyalaya, Baad-Kagal** |
| 7 | **Shri Rajesh Kakade** | **Janata Vidyalaya, Kasarkod** |
| 8 | **Shri Vithal Gaad** | **Janata Vidyalaya, Mudga** |

## 9. ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು

- ದಿವೇಕರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಯು.ಜಿ.ಸಿ.ನೆರವಿನಿಂದ ಕಟ್ಟಿಸಲಾಗಿದ್ದ ಬಾಸ್ಕೇಟ ಬಾಲ ಕೋರ್ಟನ್ನು ಪೂರ್ತಿಗೊಳಿಸಲು ಟ್ರಸ್ಟಿನಿಂದ ರೂ. 2 ಲಕ್ಷ ಹಣ ನೀಡಿ ಪೂರ್ತಿಗೊಳಿಸಲಾಗಿದೆ.
- ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜ್, ದಾಂಡೇಲಿಯ ಸಿಲ್ವರ ಜ್ಯೂಬಿಲಿಯ ಹಾಲಿಗೆ ಪ್ಲಾಸ್ಟರ ಮಾಡಿಸಿದ ಬಗ್ಗೆ ರೂ.1,16,540/–, ಜ್ಯೂನಿಯರ ಕಾಲೇಜ ಕಟ್ಟಡದ ಮೇಲೆ ಶೀಟಗಳನ್ನು ಕೂಡ್ರಿಸಿ ರೂಪಿಂಗ ರಿಪೇರಿ ಬಗ್ಗೆ 7,95,004/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.
- ಜನತಾ ವಿದ್ಯಾಲಯ ಪದವಿ ಪೂರ್ವ ಕಾಲೇಜ, ಕಡತೋಕಾ ಸುವರ್ಣ ಭವನ ಕಟ್ಟಡಕ್ಕೆ ಟ್ರಸ್ಟು ನೀಡಿದ ರೂ.5 ಲಕ್ಷ ವಿನಿಯೋಗಿಸಲಾಗಿದೆ. ಕಟ್ಟಡದ ಕೆಲಸ ಮಂದಗತಿಯಲ್ಲಿ ಸಾಗಿದೆ. ಸಂಸ್ಥೆಯ ಪ್ರಾಚಾರ್ಯರು ಮುತುವರ್ಜಿ ವಹಿಸಿ ಆದಷ್ಟು ಬೇಗನೆ ಕಟ್ಟಡದ ಕಾರ್ಯ ಪೂರ್ತಿಗೊಳಿಸಬೇಕು.
- ಜನತಾ ವಿದ್ಯಾಲಯ ಶಿರಾಲಿಯಲ್ಲಿ ಬಾಲಮಂದಿರದ 2 ಕೋಣೆಗೆ ಹಾಗೂ ಬಾಲಮಂದಿರದ ಎದುರಗಡೆ ಇರುವ ಆಲದ ಮರಕ್ಕೆ ಕಟ್ಟೆ ಕಟ್ಟಲು ರೂ.13000/– ಒಟ್ಟು ರೂ.5,13,992/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.
- ಜನತಾ ವಿದ್ಯಾಲಯ, ಬಾಡ–ಕಾಗಾಲ ಶಾಲೆಯ ಬಿಸಿಯೂಟದ ಕಟ್ಟಡಕ್ಕೆ ಸರಕಾರದ ಅನುದಾನದಿಂದ ರೂ.4,25,000/– ಖರ್ಚು ಮಾಡಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆಗೆ ಹಾಗೂ ಶಾಲೆಯ ಮುಂದುಗಡೆ ಇರುವ ಗೇಟಿಗೆ ಕೂಡಿ 1,20,000/– ಖರ್ಚು ಮಾಡಲಾಗಿದೆ. ಶಾಲೆಯ ಕಟ್ಟಡ, ಸೈಕಲ್ ಸ್ಟ್ಯಾಂಡ ಹಾಗೂ ಡೆಸ್ಕು ಬೆಂಚುಗಳ ರಿಪೇರಿ ಬಗ್ಗೆ ಒಟ್ಟೂ ರೂ.2,71,148 ಟ್ರಸ್ಟಿನಿಂದ ಖರ್ಚು ಮಾಡಲಾಗಿದೆ. ಈ ವರ್ಷ ಮಾಡಿದ ಒಟ್ಟು ಖರ್ಚು ರೂ.8,16,148/–
- ಜನತಾ ವಿದ್ಯಾಲಯ ಶಿರಾಲಿ ಶಾಲೆಯ ಬಿಸಿಯೂಟದ ಕೋಣೆಗೆ ಸರಕಾರದ ನೆರವಿನಿಂದ ರೂ.3,61,200/– ಹಾಗೂ ಹೈಸ್ಕೂಲ/ಕಾಲೇಜಿನ ಶೌಚಾಲಯ ನಿರ್ಮಾಣಕ್ಕೆ ರೂ.2,08,846/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.
- ಜನತಾ ವಿದ್ಯಾಲಯ, ಕಡವಾಡ ಶಾಲೆಯ ಬಿಸಿಯೂಟದ ಅಡಿಗೆ ಕೋಣೆಗೆ ಸರ್ಕಾರದ ನೆರವಿನಿಂದ ರೂ.3,61,200/–, ಕ್ರೀಡಾಂಗಣ ನಿರ್ಮಾಣಕ್ಕಾಗಿ ಕರ್ನಾಟಕ ಸರಕಾರದ ಯುವಜನ ಇಲಾಖೆಯಿಂದ ರೂ.1,00,000, ಬೋರ್ಡಿಗೆ ರೂ.3500/– ದಾನಿಗಳ ನೆರವಿನಿಂದ ಮತ್ತು ಶಾಲೆಯ ರಿಪೇರಿ ಬಗ್ಗೆ ಟ್ರಸ್ಟಿನಿಂದ ಒಟ್ಟೂ ರೂ.1,73,247/– ಖರ್ಚು ಮಾಡಲಾಗಿದೆ.
- ಜನತಾ ವಿದ್ಯಾಲಯ, ಕಡತೋಕಾ ಶಾಲೆಯ ಬಿಸಿಯೂಟದ ಕಟ್ಟಡಕ್ಕೆ ಸರಕಾರದ ನೆರವಿನಿಂದ ರೂ.3,16,000/– ಖರ್ಚು ಮಾಡಲಾಗಿದೆ.

❖ ಪಿ.ಎಂ.ಹೈಸ್ಕೂಲ, ಅಂಕೋಲಾದಲ್ಲಿ ಈ ವರ್ಷ ಅಭಿವೃದ್ಧಿ ಕೆಲಸಗಳಿಗಾಗಿ ಒಟ್ಟೂ ರೂ.16,09,380/– ಖರ್ಚು ಮಾಡಲಾಗಿದೆ. ಅವುಗಳಲ್ಲಿ

| | | |
|---|---|---|
| 1 | ಬಿಸಿಯೂಟದ ಕೋಣೆಗೆ | ರೂ.8,80,555 |
| 2 | ವಜ್ರಮಹೋತ್ಸವದ ನೆನಪಿನ ಸ್ಥಂಬಕ್ಕೆ | ರೂ.1,03,421 |
| 3 | ಕ್ರೀಡಾ ಸಾಮಾಗ್ರಿ ದಾಸ್ತಾನು, ವಾಚನಾಲಯ ಪಾರ್ಟಿಶನ್ ರೂಮು | ರೂ.27,500 |
| 4 | ತೋಟದ ಮದ್ಯ ಸಿಮೆಂಟ ಬ್ರಿಕ್ಸ ಕೂಡ್ರಿಸಿದ್ದು | ರೂ.1,70,000 |
| 5 | ಕಟ್ಟಡದ ಹಾಗೂ ವರಾಂಡಾ ರಿಪೇರಿ | ರೂ.65,732 |
| 6 | ಕಟ್ಟಡಕ್ಕೆ ಪೇಂಟಿಂಗ ಮಾಡಿಸಿದ್ದು | ರೂ.1,09,305 |
| 7 | ವಜ್ರಮಹೋತ್ಸವಕ್ಕೆ | ರೂ.1,28,144 |
| | ಒಟ್ಟೂ | ರೂ.16,09,380 |

ಈ ಎಲ್ಲ ಅಭಿವೃದ್ಧಿ ಕೆಲಸಗಳನ್ನು ಪೂರ್ತಿಗೊಳಿಸಲು, ಸರ್ಕಾರದ ಅನುದಾನದಿಂದ ಬಂದ ಹಣದಿಂದ, ದಾನಿಗಳ ನೆರವಿನಿಂದ ಹಾಗೂ ಆಡಳಿತ ಮಂಡಳಿ ಖಾತೆಯ ಹಣದಿಂದ ಮಾಡಿಸಿರುತ್ತಾರೆ.

❖ ಜನತಾ ವಿದ್ಯಾಲಯ, ಕಾಸರಕೋಡ ಶಾಲೆಯ ಬಿಸಿಯೂಟದ ಕೋಣೆಗೆ ಸರ್ಕಾರದ ನೆರವಿನಿಂದ ರೂ.3,16,000/–, ಶಾಲೆಗೆ ಗೇಟ ಕೂಡ್ರಿಸಿದ ಬಗ್ಗೆ ಹಾಗೂ ಬಾವಿ ರಿಪೇರಿ ಬಗ್ಗೆ ಟ್ರಸ್ಟಿನಿಂದ ರೂ.25,000/– ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ, ಮುರ್ಡೇಶ್ವರ ಶಾಲೆಗೆ ಬಿಸಿಯೂಟದ ಕೋಣೆಗೆ ಕರ್ನಾಟಕ ಸರಕಾರದಿಂದ ರೂ.5,41,000/– ಹಾಗೂ ಶಾಲೆಗೆ ಸುಣ್ಣಬಣ್ಣ ಮಾಡಲು ದಾನಿಗಳಿಂದ ಸಂಗ್ರಹಿಸಿದ ಹಣದಿಂದ ರೂ.1,00,000/– ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ, ಮಿರ್ಜಾನ–ಕೋಡಕಣಿ ಶಾಲೆಯ ಬಿಸಿಯೂಟದ ಕಟ್ಟಡಕ್ಕೆ ರೂ.3,10,221/– ಹಾಗೂ ರಿಪೇರಿ ಕೆಲಸದ ಬಗ್ಗೆ ಶಾಲೆಯ ಆಡಳಿತ ಮಂಡಳಿ ಖಾತೆಯಿಂದ ರೂ.16,095/– ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ, ಮುದಗಾ ಶಾಲೆಯ ಬಿಸಿಯೂಟದ ಕಟ್ಟಡವನ್ನು ಸರ್ಕಾರದ ನೆರವಿನಿಂದ ರೂ.3,61,200/– ಹಾಗೂ ಕಟ್ಟಡ ರಿಪೇರಿ ಬಗ್ಗೆ ಟ್ರಸ್ಟಿನಿಂದ ರೂ.11,000/– ಖರ್ಚು ಮಾಡಲಾಗಿದೆ.

❖ ಎಸ್.ಕೆ.ಪಿ.ಹೈಸ್ಕೂಲ್, ಕತಗಾಲ ಶಾಲೆಯ ಅಡುಗೆ ಕೋಣೆಯ ನಿರ್ಮಾಣಕ್ಕೆ ರೂ.4,06,000/– ಸಭಾಭವನ ನಿರ್ಮಾಣಕ್ಕೆ ದಾನಿಗಳ ನೆರವಿನಿಂದ ರೂ.15,00,000/– ನೆಲಕ್ಕೆ ಇಂಟರಲಾಕ್ ಅಳವಡಿಸಲು ರೂ.1,35,000/– ದಾನಿಗಳ ನೆರವಿನಿಂದ ಹಾಗೂ ಬಾವಿ ರಿಪೇರಿ ಕೆಲಸಕ್ಕೆ ಟ್ರಸ್ಟಿನ ನೆರವಿನಿಂದ ರೂ.30,000/– ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ ಬೇಡಕಣಿ ಶಾಲೆಯ ಬಿಸಿಯೂಟದ ಕೋಣೆಗೆ ಸರ್ಕಾರದ ನೆರವಿನಿಂದ ಬಂದ ಹಣ ರೂ.2,73,845ದರಲ್ಲಿ ರೂ.1,76,000/– ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ, ಅನಿಲಗೋಡ ಶಾಲೆಗೆ ಸರ್ಕಾರದ ನೆರವಿನಿಂದ ಬಿಸಿಯೂಟದ ಕಟ್ಟಡಕ್ಕೆ ರೂ.3,70,000/–, ಶಾಲಾ ಕಟ್ಟಡ ರಿಪೇರಿ ಬಗ್ಗೆ ಜಿಲ್ಲಾ ಪಂಚಾಯತನಿಂದ ರೂ.1,00,000/– ಕ್ರೀಡಾ ಸಾಮಗ್ರಿ ಖರೀದಿಗೆ ರೂ.50,000/– ಕ್ರೀಡಾ ಇಲಾಖೆಯಿಂದ ಕುಡಿಯುವ ನೀರಿನ ವ್ಯವಸ್ಥೆಗೆ ರೂ.7,000/– ಶಾಲೆಯ ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

❖ ಜನತಾ ವಿದ್ಯಾಲಯ, ಕುಳವೆ–ಬರೂರ ಶಾಲೆಯ ಸಭಾಭವನದ ನಿರ್ಮಾಣಕ್ಕೆ ರೂ.8,00,000/– (ದಾನಿಗಳ ನೆರವಿನಿಂದ ರೂ.6 ಲಕ್ಷ ಹಾಗೂ ಟ್ರಸ್ಟಿನ ನೆರವಿನಿಂದ ರೂ.2 ಲಕ್ಷ) ತೋಟದ ನವೀಕರಣಕ್ಕೆ ರೂ.10,000/– ಶಾಲಾ ಅಭಿವೃದ್ಧಿ ಸಮಿತಿಯಿಂದ ಹಾಗೂ ಬಿಸಿಯೂಟದ ಅಡುಗೆ ಕೋಣೆ ನಿರ್ಮಾಣಕ್ಕೆ ರೂ.3,61,000/– ಕರ್ನಾಟಕ ಸರಕಾರದ ನೆರವಿನಿಂದ ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ ಧಾರೇಶ್ವರ ಶಾಲೆಯ ಬಿಸಿಯೂಟದ ಕೋಣೆಗೆ ಸರ್ಕಾರದ ನೆರವಿನಿಂದ ರೂ.3,16,000/– ಹಾಗೂ ಶೌಚಾಲಯ ನಿರ್ಮಾಣಕ್ಕೆ ರೂ.1,20,309/– ಟ್ರಸ್ಟಿನ ನೆರವಿನಿಂದ ಖರ್ಚು ಮಾಡಲಾಗಿದೆ.

❖ ಜನತಾ ವಿದ್ಯಾಲಯ ದಾಂಡೇಲಿಯ ಹೈಸ್ಕೂಲಿನ ಬಿಸಿಯೂಟದ ಕಟ್ಟಡಕ್ಕೆ ಸರ್ಕಾರದಿಂದ ರೂ.6,62,200/– ಅನುದಾನ ಮಂಜೂರಾಗಿದ್ದು ಕೆಲಸ ಪ್ರಗತಿಯಲ್ಲಿದೆ.

❖ ಪಿ.ಎಮ್.ಆಂಗ್ಲ ಮಾಧ್ಯಮ ಶಾಲೆಯ ಮುಂದುಗಡೆ ನೆಲಕ್ಕೆ ಇಂಟರಲಾಕ್ ಕೂಡ್ರಿಸುವ ಬಗ್ಗೆ ರೂ.54,390/– ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ.

❖ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆ, ದಾಂಡೇಲಿ ಬಿಸಿಯೂಟದ ಕೋಣೆಗೆ ಸರ್ಕಾರದ ಅನುದಾನದಿಂದ ರೂ.6,62,200/– ಹಾಗೂ ಶೌಚಾಲಯ ನಿರ್ಮಾಣಕ್ಕೆ ಹಾಗೂ ರಿಪೇರಿ ಕೆಲಸದ ಬಗ್ಗೆ ರೂ.1,49,499/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

❖ ಕನ್ನಡ ಮಾದ್ಯಮ ಶಾಲೆ ದಾಂಡೇಲಿ ಇದರ ಮುಂದುಗಡೆ ನೆಲಕ್ಕೆ ಇಂಟರಲಾಕ ಮಾಡಿಸಲು ರೂ.68,128/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

❖ ಡಾ.ದಿನಕರ ದೇಸಾಯಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಅಂಕೋಲಾದಲ್ಲಿ ಕಂಪ್ಯೂಟರ ಖರೀದಿ, ಬಾವಿ ನಿರ್ಮಾಣಕ್ಕೆ ಹಾಗೂ ರಿಪೇರಿ ಕೆಲಸಕ್ಕೆ ರೂ.1,72,690/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

❖ ದಿನಕರ ಪ್ರಾಥಮಿಕ ಶಾಲೆ ಧಾರೇಶ್ವರ ಶಾಲೆಗೆ ಖರ್ಚಿಗಳನ್ನು, 2 ಕಂಪ್ಯೂಟರನ್ನು ಹಾಗೂ ಇನ್ನಿತರ ಸಾಮಾಗ್ರಿ ಖರೀದಿಸಲು ಒಟ್ಟೂ ರೂ.1,32,755/– ಖರ್ಚು ಮಾಡಲಾಗಿದೆ. ಈ ಹಣವನ್ನು ತಾಲೂಕಾ ಪಂಚಾಯತ ಕುಮಟಾರವರು ನೀಡಿದ ಅನುದಾನದಿಂದ ಮಾಡಲಾಗಿದೆ.


❖ ಟ್ರಸ್ಟಿನ ಸಾಪ್ಟವೇರ ಬಗ್ಗೆ, ಕಂಪ್ಯೂಟರ ಬಗ್ಗೆ ಮತ್ತು ಫರ್ನಿಚರ ಬಗ್ಗೆ 1,01,848/– ಖರ್ಚು ಮಾಡಲಾಗಿದೆ. ಮತ್ತು ಚೆರಮನ್ ಕ್ವಾರ್ಟರ್ಸ ರಿಪೇರಿ ಬಗ್ಗೆ 1,15,977 ಮತ್ತು ಸ್ಟಾಫ್ ಕ್ವಾರ್ಟರ್ಸ ರಿಪೇರಿ ಬಗ್ಗೆ 21,455/– ಒಟ್ಟೂ 2,39,288 ಖರ್ಚು ಮಾಡಲಾಗಿದೆ.

## 10.ಕ್ರುಗರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ

ಟ್ರಸ್ಟು ನಡೆಸುತ್ತಿರುವ ಕೆಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಈ ಕೊರತೆ ನೀಗಿಸಲು ಆಡಳಿತ ಮಂಡಳಿಯವರು ಪ್ರತಿ ವರ್ಷ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಶಾಲೆಗಳ ಶೈಕ್ಷಣಿಕ ಮಟ್ಟ ಕುಸಿಯದಂತೆ ನೋಡಿಕೊಂಡು ಅವರಿಗೆ ಸಂಭಾವನೆ ನೀಡುತ್ತ ಬಂದಿದೆ. ಅವರಿಗೆ ನೀಡುತ್ತಿರುವ ಸಂಭಾವನೆ ಮೊತ್ತ ಕಡಿಮೆ ಇರುವದನ್ನು ಮನಗಂಡು ಟ್ರಸ್ಟಿನ ಅಧ್ಯಕ್ಷರು 2006–2007ನೇ ಸಾಲಿನಿಂದ ತಾತ್ಕಾಲಿಕ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1000/– ರಂತೆ ಕ್ರುಗರ್ ಫೌಂಡೆಶನ್ ವತಿಯಿಂದ ಸಹಾಯಧನವಾಗಿ ನೀಡುತ್ತ ಬಂದಿದ್ದಾರೆ. ಈ ಸಂಭಾವನೆ ಪಡೆಯುವ ಎಲ್ಲ ಶಿಕ್ಷಕರು ಶಾಲೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಿ ಅವರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವದು ಇದರ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ತಾತ್ಕಾಲಿಕ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕ್ರುಗರ ಪೌಂಡೇಶನನಿಂದ ಇದುವರೆಗೆ ಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಿದ ಸಹಾಯಧನದ ವಿವರ ಈ ಕೆಳಗಿನಂತೆ ಇದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ಕ್ರುಗರ ಫೌಂಡೇಶನ ನೀಡಿದ ಸಹಾಯ ಧನ | ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಒಟ್ಟು ಸಂಭಾವನೆ |
|---|---|---|---|
| 2006-2007 | 86 | Rs. 3,00,000 | Rs. 2,64,500 |
| 2007-2008 | 88 | Rs. 3,50,000 | Rs. 3,81,500 |
| 2008-2009 | 90 | Rs. 4,00,000 | Rs. 3,84,000 |
| 2009-2010 | 79 | Rs. 3,50,000 | Rs. 3,39,500 |
| 2010-2011 | 78 | Rs. 5,00,000 | Rs. 5,33,500 |
| 2011-2012 | 55 | Rs. 4,59,000 | Rs. 4,13,500 |
| 2012-2013 | 55 | Rs. 4,50,000 | Rs. 4,40,000 |
| 2013-2014 | 54 | Rs. 4,41,500 | Rs. 4,59,000 |
| **Total** | | **Rs.32,50,500** | **Rs.32,15,500** |



ಈ ಯೋಜನೆಗೆ ಇದುವರೆಗೆ ಕ್ರುಗರ್ ಫೌಂಡೇಶನ್, ಕಾರವಾರದ ಅಧ್ಯಕ್ಷರು ರೂ.32,50,500/– ಸಹಾಯಧನ ನೀಡಿ ಪ್ರೋತ್ಸಾಹ ನೀಡಿದ್ದಾರೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರಿಗೂ ಕ್ರುಗರ್ ಫೌಂಡೆಶನ್ ಕಾರವಾರ ಇವರಿಗೂ ಟ್ರಸ್ಟಿನ ಪರವಾಗಿ ಹಾಗೂ ಎಲ್ಲ ಸಂಸ್ಥೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.

2014–2015ನೇ ಶೈಕ್ಷಣಿಕ ವರ್ಷದಲ್ಲಿಯೂ ಈ ಯೋಜನೆ ಮುಂದುವರೆಸಬೇಕಾಗಿ ಮಾನ್ಯ ಅಧ್ಯಕ್ಷರಿಗೆ ತಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

## 11. 'ಜನರಲ್ ವೆಲ್‌ಪೆರ್ ಫಂಡ್' ನಿಂದ ನೀಡಿದ ಸಹಾಯಧನ

2012–2013ನೇ ಸಾಲಿನಲ್ಲಿ ಕೆನರಾ ವೆಲ್‌ಫೆರ್ ಟ್ರಸ್ಟು **"General Welfare Fund"** ಎಂಬ ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಫಂಡಿಗಾಗಿ ಟ್ರಸ್ಟಿನ ನಿಧಿಯಿಂದ 2012–2013ನೇ ಸಾಲಿನಿಂದ ಪ್ರತಿವರ್ಷ ಒಂದು ಲಕ್ಷ ವರ್ಗಾಯಿಸಲಾಗಿದೆ. ಈ ನಿಧಿಯಿಂದ ಅಸಹಾಯಕರಿಗೆ, ಆರ್ಥಿಕವಾಗಿ ತೀರಾ ಬಡವರಿದ್ದು ವೈದ್ಯಕೀಯ ಖರ್ಚು ನಿರ್ವಹಿಸಲು ಸಾಧ್ಯವಾಗದವರಿಗೆ ಸಹಾಯವನ್ನು ನೀಡಲು ಟ್ರಸ್ಟು ಬಯಸಿದೆ. ಈ ಕುರಿತು ದಿನಾಂಕ 12–10–2012 ರಂದು ಜರುಗಿದ ಟ್ರಸ್ಟಿನ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ.

2013–14ನೇ ಸಾಲಿನಲ್ಲಿ ಈ ನಿಧಿಯಿಂದ ಸಹಾಯ ಪಡೆದ ಫಲಾನುಭವಿಗಳು.

| | | |
|---|---|---|
| 1 | ಶ್ರೀ ವಿ.ಜಿ.ಪಾಟೀಲ, ಸಂಗೀತ ಶಿಕ್ಷಕರು (ಚಿಕಿತ್ಸೆಗಾಗಿ) | ರೂ.15,907 |
| 2 | ಕುಮಾರ ಅಕ್ಷಯ ಕೆ.ಭಟ್ಟ, ಎಸ್.ಕೆ.ಪಿ.ಹೈಸ್ಕೂಲ, ಕತಗಾಲ ಶಾಲೆಯ ವಿದ್ಯಾರ್ಥಿ (ವೈದ್ಯಕೀಯ ವೆಚ್ಚಕ್ಕಾಗಿ) | ರೂ.5,000 |
| 3 | ಕುಮಾರ ನವೀನ ಎಮ್.ನಾಯ್ಕ, ಜನತಾ ವಿದ್ಯಾಲಯ ಕಾಸರಕೋಡಿನ ವಿದ್ಯಾರ್ಥಿ (ಅಪಘಾತವಾಗಿದ್ದರಿಂದ ಚಿಕಿತ್ಸೆಗಾಗಿ) | ರೂ.10,000 |
| 4 | ಶ್ರೀಮತಿ ಸವಿತಾ ಎ.ಆಗೇರ, ವಂದಿಗೆ, ಅಂಕೋಲಾ ಇವರ ಗಂಡನ ಚಿಕಿತ್ಸೆಗಾಗಿ | ರೂ.5,000 |
| 5 | ಶ್ರೀಮತಿ ಪಿ.ಡಿ.ವಾಜ, ಶಿಕ್ಷಕಿ ಇವರ ಗಂಡನ ಚಿಕಿತ್ಸೆಗಾಗಿ | ರೂ.10,000 |
| 6 | ಕುಮಾರ ನಾಗರಾಜ ಪಟಗಾರ, ಜನತಾ ವಿದ್ಯಾಲಯ, ಧಾರೇಶ್ವರ ವಿದ್ಯಾರ್ಥಿ (ಔಷದೋಪಚಾರದ ಬಗ್ಗೆ) | ರೂ.10,000 |
| 7 | ಶ್ರೀ ಸುರೇಶ ಎಮ್.ನಾಯ್ಕ ತೆಂಕಣಕೇರಿ, ಅಂಕೋಲಾ (ಔಷದೋಪಚಾರದ ಬಗ್ಗೆ) | ರೂ.5,000 |
| | **ಒಟ್ಟು** | **ರೂ.60,907** |

**'ಜನರಲ್ ವೆಲ್‌ಪೇರ್ ಫಂಡ್'** ನಿಧಿಗಾಗಿ ದಾನಿಗಳು ಹಣ ನೀಡಿದರೆ ಆ ಹಣವನ್ನು ಈ ಖಾತೆಗೆ ಟ್ರಸ್ಟಿನಲ್ಲಿ ಜಮಾ ಮಾಡಲಾಗುವದು. ಸಂಸ್ಥೆಯ ಮುಖ್ಯಸ್ಥರು ಈ ಯೋಜನೆಗಾಗಿ ಹಣ ಸಂಗ್ರಹಿಸಿದರೆ ನೇರವಾಗಿ ಟ್ರಸ್ಟಿಗೆ ಸಂದಾಯ ಮಾಡಬೇಕು. ಅವರಿಗೆ ಟ್ರಸ್ಟಿನಿಂದ ರಸೀದಿ ನೀಡಲಾಗುವದು. ಈ ದೇಣಿಗೆಗೆ Income Tax benefit under Sec. 80G ಸೌಲಭ್ಯ ಕೂಡಾ ಇದೆ.

## 12.2013–2014ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ ಇತ್ಯಾದಿಗಳ ವಿವರ

| ಅ. ನಂ. | ಶಾಲೆ/ಕಾಲೇಜಿನ ಹೆಸರು | ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ | ಟ್ರಸ್ಟಿನಿಂದ ನೀಡಿದ ಮೆಂಟೆನನ್ಸ ಹಣ | ಕಟ್ಟಡ ನಿರ್ಮಾಣ, ಅಬಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ |
|---|---|---|---|---|
| | **DEGREE COLLEGES** | | | |
| 1 | Gokhale Centenary College, Ankola | Rs.10,34,440 | - | - |
| 2 | Divekar College of Commerce, Karwar | Rs.6,82,028 | - | 2,00,000 |
| 3 | KWT's College of Education, Dandeli | Rs.8,65,500 | - | - |
| 4 | B.C.A. College, Karwar | Rs.6,79,200 | - | - |
| | **JUNIOR COLLEGES** | | | |
| 5 | Gokhale Centenary PU College, Ankola | Rs.10,05,834 | - | - |
| 6 | Divekar P.U. Com. College, Karwar | Rs.4,32,729 | - | - |
| 7 | J.V.Comp. Jr. College, Dandeli | Rs.1,73,508 | - | Rs.9,11,544 |
| 8 | J.V.Comp. Jr. College, Kadtoka | Rs.1,16,000 | Rs.7,500 | Rs.5,00,000 |
| 9 | J.V.Comp. Jr. College, Shirali, Bhatkal | Rs.7,14,800 | Rs.7,500 | Rs.5,00,992 |
| 10 | P.M. Comp. Junior College, Ankola | Rs.86,382 | - | - |
| 11 | Divekar P.U. Science College, Karwar | Rs.6,81,072 | - | - |
| | **HIGH SCHOOLS** | | | |
| 12 | P.M. High School, Ankola | Rs.2,21,300 | Rs.7,500 | Rs.16,09,380 |
| 13 | Janata Vidyalaya, Baad-Kagal, Kumta | Rs.69,300 | Rs.7,500 | Rs.8,16,148 |
| 14 | Janata Vidyalaya, Shirali, Bhatkal | Rs.73,000 | - | Rs. 5,70,046 |
| 15 | Janata Vidyalaya, Dandeli | Rs.4,69,856 | - | Rs.6,62,200 |
| 16 | Janata Vidyalaya, Kadwad, Karwar | Rs.58,100 | Rs.7,500 | Rs.6,37,947 |
| 17 | Janata Vidyalaya, Kasarkod, Honnavar | Rs.1,10,000 | Rs.7,500 | Rs.3,41,000 |
| 18 | Janata Vidyalaya, Murdeshwar, Bhatkal | Rs.3,47,400 | Rs.7,500 | Rs.6,41,000 |
| 19 | Janata Vidyalaya, Mirjan-Kodkani | Rs.72,200 | Rs.7,500 | Rs.3,26,316 |
| 20 | Janata Vidyalaya, Kadtoka | Rs.48,000 | - | Rs.3,16,000 |
| 21 | Janata Vidyalaya, Mudga, Karwar | Rs.45,000 | Rs.7,500 | Rs.3,72,200 |
| 22 | Janata Vidyalaya, Dhareshwar, Kumta | -- | Rs.7,500 | Rs.4,36,309 |
| 23 | Janata Vidyalaya, Bedkani, Siddapur | Rs.46,500 | Rs.7,500 | Rs.2,73,845 |
| 24 | S.K.P. High School, Katgal, Kumta | Rs.1,77,300 | Rs.7,500 | Rs.20,71,008 |
| 25 | Janata Vidyalaya, Anilgod, Honnavar | Rs.15,000 | Rs.7,500 | Rs.6,27,000 |
| 26 | Janata Vidyalaya, Kulve-Baroor, Sirsi | Rs.28,400 | Rs.7,500 | Rs.11,71,000 |
| 27 | P.M.Eng. Medium High School,Ankola | Rs.4,73,505 | - | Rs.54,390 |
| | **PRIMARY AND PRE-PRIMARY SCHOOLS** | | | |
| 28 | English Medium Primary School, Dandeli | Rs.15,93,957 | - | Rs.8,11,699 |
| 29 | English Medium Pre-Primary School, Dandeli | Rs.3,65,350 | - | - |
| 30 | Kannada Medium Primary School, Dandeli | Rs.7,09,546 | - | Rs.68,128 |
| 32 | Kannada Medium Pre-Primary School, Dandeli | Rs.1,54,005 | - | - |

| | | | | |
|---|---|---|---|---|
| 33 | Balamandir & Tailoring School, Mundgod | Rs.20,000 | - | Rs.15,000 |
| 34 | Dr. Dinkar Desai School, Ankola | Rs.8,82,215 | - | Rs.1,72,690 |
| 35 | ThakkaraBapa Pre-Primary School, Ankola | Rs.1,54,281 | | - |
| 36 | Dinkar Pre-Primary/Primary School, Dhareshwar | Rs.4,91,550 | - | Rs.1,32,755 |
| 37 | Balamandir, Shirali | Rs.1,74,050 | - | Rs.5,13,992 |
| | **OTHER SOCIAL SERVICE INSTITUTIONS** | | | |
| 38 | Thakkar Bapa Tailoring School, Ankola | Rs.22,000 | - | - |
| 39 | Trust Office Staff & Music Schools - Ankola & | Rs.6,23,700 | - | Rs.2,39,288 |
| 40 | Divekar College – Computer Section | Rs.3,88,006 | - | - |
| | **Total** | **Rs.1,36,25,814** | **Rs.1,05,000** | **Rs.1,49,91,877** |

## ತಾತ್ಕಾಲಿಕವಾಗಿ ಸೇವೆ ಸಲ್ಲಿಸುವವರ ಭವಿಷ್ಯ ನಿಧಿ


2013–14ನೇ ಸಾಲಿನಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಾಲಾ ಕಾಲೇಜುಗಳಲ್ಲಿ ಹಾಗೂ ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನ ರಹಿತ ಸಿಬ್ಬಂದಿಗಳಿಗೆ ಸರ್ಕಾರದ ನಿಯಮದಂತೆ ಶೇಕಡಾ 12% ರಂತೆ ಭವಿಷ್ಯ ನಿಧಿಯನ್ನು ತುಂಬಲಾಗಿದೆ. ಅದರ ವಿವರ ಈ ಕೆಳಗಿನಂತೆ ಇದೆ.

| | | |
|---|---|---|
| 1 | ಸಿಬ್ಬಂದಿಗಳ ಭವಿಷ್ಯ ನಿಧಿ ವಂತಿಗೆ ಶೇಕಡಾ 12% | Rs.6,41,422 |
| 2 | ಟ್ರಸ್ಟಿನಿಂದ ಪಾವತಿಸಿದ ಭವಿಷ್ಯ ನಿಧಿ ವಂತಿಗೆ 12% + 1.58% = 13.58%<br>*(ಸರ್ವಿಸ್ ಹಾಗೂ ಇನ್ನಿತರ ವಂತಿಗೆ* 1.58%) | Rs.7,35,536 |
| | ಒಟ್ಟು | **Rs.13,76,958** |

2013–2014ನೇ ಸಾಲಿನಲ್ಲಿ (1) ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ (2) ಶಾಲಾ–ಕಾಲೇಜುಗಳ ನಿರ್ವಹಣಾ ವೆಚ್ಚಕ್ಕೆ (3) ಭವಿಷ್ಯನಿದಿ ವಂತಿಗೆಗೆ (4) ಅಭಿವೃದ್ಧಿ ಕಾರ್ಯಗಳಿಗೆ ಹಾಗೂ (5) ಕ್ರೂಗರ ಫೌಂಢೇಶನ್‌ನಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ Ex-gratia ಹಣದ ಒಟ್ಟೂ ವಿವರ ಈ ಕೆಳಗಿನಂತಿದೆ.

## ABSTRACT

| | | |
|---|---|---|
| I | ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ | **Rs.1,36,25,814** |
| II | ಶಾಲಾ–ಕಾಲೇಜುಗಳ ನಿರ್ವಹಣಾ ವೆಚ್ಚಕ್ಕಾಗಿ ನೀಡಿದ ಹಣ | **Rs. 1,05,000** |
| III | ಭವಿಷ್ಯನಿದಿಗೆ ಆಡಳಿತ ಮಂಡಳಿ ಸಂದಾಯ ಮಾಡಿದ ವಂತಿಗೆ | **Rs. 7,35,536** |
| IV | ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದ ವೆಚ್ಚ | **Rs.1,47,94,032** |
| V | ಕ್ರೂಗರ ಫೌಂಢೇಶನ್‌ನಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ Ex-gratia ಹಣ | **Rs. 4,59,000** |
| VI | ಜನರಲ್ ವೆಲ್‌ಫೆರ್ ಫಂಡ್, Legal Fees, Audit Fees, etc. | **Rs. 4,59,000** |
| | ಒಟ್ಟೂ | **Rs.3,00,37,476** |




2013–2014ನೇ ಸಾಲಿನಲ್ಲಿ ಅನುದಾನ ರಹಿತ ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ, ಅಭಿವೃದ್ಧಿ ಕಾರ್ಯಗಳಿಗಾಗಿ, ಭವಿಷ್ಯ ನಿಧಿ ವಂತಿಗೆಗಾಗಿ ಹಾಗೂ ಇನ್ನಿತರ ಕಾರ್ಯಕ್ಕಾಗಿ ಒಟ್ಟು **ರೂ.3,00,37,476/– (ರೂಪಾಯಿ ಮೂರು ಕೋಟಿ ಮೊವತ್ತೇಳು ಸಾವಿರದ ನಾಲ್ಕು ನೂರಾ ಎಪ್ಪತ್ತಾರು)** ಖರ್ಚು ಮಾಡಲಾಗಿದೆ. ಈ ಎಲ್ಲ ಕಾರ್ಯಕ್ಕೆ ಮಾಡಿದ ವೆಚ್ಚವನ್ನು ಟ್ರಸ್ಟು ನಡೆಸುತ್ತಿರುವ ವಿವಿಧ ಕೇಂದ್ರಗಳಲ್ಲಿ ಆಡಳಿತ ಮಂಡಳಿ ಖಾತೆಗೆ ಸಂಗ್ರಹಿಸಿದ ಹಣದಿಂದ, ದಾನಿಗಳಿಂದ ಸಂಗ್ರಹಿಸಿದ ಹಣದಿಂದ, ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ, ಶಾಸಕರ ಹಾಗೂ ಲೋಕ ಸಭಾ ಸದಸ್ಯರ ಅಭಿವೃದ್ಧಿ ನಿಧಿಯಿಂದ ಬಂದ ಹಣದಿಂದ, ಕ್ರೂಗರ್ ಫೌಂಡೇಶನ್ ನೀಡಿದ ಹಣದಿಂದ ಹಾಗೂ ಟ್ರಸ್ಟು ನೀಡಿದ ಹಣದಿಂದ ನಿರ್ವಹಿಸಲಾಗಿದೆ. ಈ ಹಣದಲ್ಲಿ 2013–14ನೇ ಸಾಲಿನಲ್ಲಿ ಕರ್ನಾಟಕ ಸರಕಾರ ಎಲ್ಲ 16 ಅನುದಾನಿತ ಶಾಲೆಗಳಿಗೆ ಬಿಸಿಯೂಟದ ಕೋಣೆ ನಿರ್ಮಾಣಕ್ಕೆ ನೀಡಿದ ಅನುದಾನ ಒಟ್ಟು ರೂ.64,03,866/– ಕೂಡಿರುತ್ತದೆ. ಬಿಸಿಯೂಟದ ಕೋಣೆ ನಿರ್ಮಾಣಕ್ಕೆ ರಾಜ್ಯ ಸರಕಾರ ಅನುದಾನ ನೀಡಿದ ಬಗ್ಗೆ ಸರಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಹಣ ಸಂಗ್ರಹಿಸುವಲ್ಲಿ, ಇಲಾಖೆಗಳಿಂದ ಅನುದಾನ ಪಡೆಯುವಲ್ಲಿ ನಮ್ಮ ಟ್ರಸ್ಟಿನ ಸಂಸ್ಥೆಯ ಮುಖ್ಯಸ್ಥರು, ವಿಶೇಷ ಶ್ರಮವಹಿಸಿ ಕಾರ್ಯನಿರ್ವಹಿಸಿದ್ದಾರೆ. ಅವರೆಲ್ಲರಿಗೂ ನಾನು ಟ್ರಸ್ಟಿನ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

2014–2015ನೇ ಸಾಲಿನಲ್ಲಿಯೂ ಕೂಡಾ ಸಂಸ್ಥೆಯ ಎಲ್ಲ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು ಹೆಚ್ಚಿನ ಪ್ರಯತ್ನ ಮಾಡಿ ವಿಶೇಷ ನಿಧಿಯನ್ನು ಸಂಗ್ರಹಿಸಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡು, ಟ್ರಸ್ಟು ಒಂದು ಮಾದರಿ ಸಂಸ್ಥೆಯಾಗಿ ರಾಜ್ಯದಲ್ಲಿ ಹೆಸರು ಗಳಿಸುವಂತೆ ಕಾರ್ಯ ನಿರ್ವಹಿಸಲಿ ಎಂದು ಆಶಿಸುತ್ತೇನೆ.

## 13.ಶಿಕ್ಷಣಕ್ಕಾಗಿ ಆರ್ಥಿಕ ನೆರವು –2012–2013ನೇ ಸಾಲಿನಲ್ಲಿ ಪ್ರಾರಂಭಿಸಿದ ಹೊಸ ಯೋಜನೆ

ಆರ್ಥಿಕ ಕಾರಣಗಳಿಂದ ಬಡ ಹಾಗೂ ಅರ್ಹ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕಾರಣದಿಂದ "ಶಿಕ್ಷಣಕ್ಕಾಗಿ ಆರ್ಥಿಕ ನೆರವು" ಎಂಬ ಯೋಜನೆ 2012–2013ನೇ ಸಾಲಿನಿಂದ ಪ್ರಾರಂಭಿಗೊಂಡಿದೆ.

ಈ ಯೋಜನೆಯ ಪ್ರಾಯೋಜಕತ್ವವನ್ನು ಕ್ರುಗರ್ ಫೌಂಡೇಶನ್, ಕಾರವಾರ ಹಾಗೂ ಉಚ್ಛನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ವಹಿಸಿಕೊಂಡಿದ್ದಾರೆ. ಈ ಮಹತ್ವದ ಯೋಜನೆಯನ್ನು ಟ್ರಸ್ಟು ಕಾರ್ಯಗತಗೊಳಿಸುತ್ತಿದೆ.

2012–13ರಲ್ಲಿ ಪ್ರಥಮ ಬಾರಿಗೆ ಈ ಯೋಜನೆಯ ಲಾಭ ಪಡೆಯಲು 1300ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದರು. ಶಿಕ್ಷಣಕ್ಕಾಗಿ ಆರ್ಥಿಕ ನೆರವು ಪಡೆಯಲು ಸಲ್ಲಿಸಿದ ಅರ್ಜಿಯನ್ನು ಟ್ರಸ್ಟು ನೇಮಿಸಿದ ಪರಿಶೀಲನಾ ಸಮಿತಿ ಅರ್ಜಿ ಪರಿಶೀಲಿಸಿ ಅದರಲ್ಲಿ ಆರ್ಥಿಕವಾಗಿ ಬಡವರಾಗಿದ್ದು ಪರೀಕ್ಷೆಯಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಿ 300 ಜನರ ಪಟ್ಟಿಯನ್ನು ಪ್ರಾಯೋಜಕರಿಗೆ ಸಲ್ಲಿಸಿದಂತೆ ಪ್ರಾಯೋಜಕರು ಆಯ್ಕೆಯಾದ 300 ವಿದ್ಯಾರ್ಥಿಗಳಿಗೆ ತಲಾ 3000/–ದಂತೆ ಒಟ್ಟೂ ರೂ.9 ಲಕ್ಷ ಹಣವನ್ನು ದಿನಾಂಕ 08–09–2012 ರಂದು ಜಿ.ಸಿ.ಕಾಲೇಜಿನಲ್ಲಿ ನಡೆದ ಸರಳ ಹಾಗೂ ಸುಂದರ ಸಮಾರಂಭದಲ್ಲಿ ಈ ಯೋಜನೆಯ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರು ಡಿ.ಡಿ. ಮೂಲಕ ವಿತರಿಸಿದರು.

2013–14ನೇ ಸಾಲಿನಲ್ಲಿ ಈ ಯೋಜನೆಯನ್ನು ಪ್ರಾಯೋಜಕರು ಮುಂದುವರೆಸಿದ್ದು, ಅರ್ಹ ಹಾಗೂ ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಒಟ್ಟೂ 500 ವಿದ್ಯಾರ್ಥಿಗಳಿಗೆ Online ಮೂಲಕ ಪ್ರತಿಯೊಬ್ಬರಿಗೆ ರೂ.3000/–ದಂತೆ ಅವರ ಖಾತೆಗೆ ಜಮಾ ಮಾಡಲಾಗಿದೆ. 2013–14ರಲ್ಲಿ ವಿತರಿಸಿದ ಒಟ್ಟೂ ಹಣ ರೂ.15,00,000/– ಈ ಹಣವನ್ನು ವಿತರಣೆ ಮಾಡುವ ಪೂರ್ವದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಆಮಂತ್ರಿಸಿ ಒಂದು ಸುಂದರವಾದ ಹಾಗೂ ಸರಳವಾದ ಸಮಾರಂಭವನ್ನು ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾದಲ್ಲಿ ದಿನಾಂಕ 05–11–2013ರಂದು ಏರ್ಪಡಿಸಲಾಗಿತ್ತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕೇಂದ್ರ ಸರಕಾರದ ಅಂದಿನ ಮಂತ್ರಿಗಳಾದ ಶ್ರೀ ಮನೀಶ ತಿವಾರಿಯವರು ಹಾಗೂ ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆಯವರು ಭಾಗವಹಿಸಿದ್ದರು. ಅರ್ಹ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಆರ್ಥಿಕ ಸಹಾಯ ನೀಡುತ್ತಿರುವ ಯೋಜನೆಯನ್ನು ಪ್ರಶಂಸಿಸಿ ಪ್ರಾಯೋಜಕರಿಗೆ ಅಭಿನಂದಿಸಿದರು.






2014–15ನೇ ಸಾಲಿನಲ್ಲಿಯೂ ಈ ಯೋಜನೆಯನ್ನು ಪ್ರಾಯೋಜಕರು ಮುಂದುವರೆಸಿದ್ದು, ಅರ್ಹ ಹಾಗೂ ಬಡ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ವರ್ಷದಲ್ಲಿ ಕೂಡ ಹೊಸದಾಗಿ 300 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಿದ್ದು ಒಟ್ಟೂ 800 ವಿದ್ಯಾರ್ಥಿಗಳು ಇದರ ಲಾಭ ಪಡೆಯಲಿದ್ದಾರೆ. ಒಟ್ಟೂ ಈ ವರ್ಷ ಈ ಯೋಜನೆಗೆ ರೂ.25 ಲಕ್ಷ ಪ್ರಾಯೋಜಕರು ನೀಡಲಿದ್ದಾರೆ.

ಈ ಯೋಜನೆಯ ಪ್ರಾಯೋಜಕರಿಗೂ ಹಾಗೂ ಆಯ್ಕೆ ಮಾಡುವ ಪರಿಶೀಲನಾ ಸಮಿತಿಯವರಿಗೂ ಹಾಗೂ ಎಲ್ಲ ಸಂಘಟಕರಿಗೂ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

## 14. Mobile Health Care Project – ಆರೋಗ್ಯ ತಪಾಸಣೆ ಮತ್ತು ಔಷದೋಪಚಾರ ಶಿಬಿರ

2013ನೇ ಸಾಲಿನಿಂದ ಜಿಲ್ಲೆಯ ವಿವಿಧ ಗ್ರಾಮೀಣ ಭಾಗದಲ್ಲಿ ನುರಿತ ತಜ್ಞ ವೈದ್ಯರಿಂದ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಅರ್ಹ ಫಲಾನುಭವಿಗಳಿಗೆ ಉಚಿತ ಔಷದವನ್ನು ನೀಡುವ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಪೂರ್ಣ ವೆಚ್ಚವನ್ನು ಕ್ರುಗರ್ ಫೌಂಡೇಶನ್, ಕಾರವಾರ ಹಾಗೂ ಸುಪ್ರೀಮ್ ಕೋರ್ಟಿನ ಯುವ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ಪ್ರಾಯೋಜಕರಾಗಿ ಭರಿಸಲು ಒಪ್ಪಿಕೊಂಡಿರುತ್ತಾರೆ.

ಈ ಯೋಜನೆಯ ಮೊದಲನೇಯ ಶಿಬಿರವನ್ನು ದಿನಾಂಕ 16–06–2013 ರಂದು ಅಂಕೋಲಾ ತಾಲೂಕಿನ ಬಾಸಗೋಡ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು.





ಈ ಶಿಬಿರದ ಪ್ರಯೋಜನ ಪಡೆಯಲು ವಿವಿಧ ಹಳ್ಳಿಗಳಿಂದ ಒಟ್ಟು 272 ರೋಗಿಗಳು ಆಗಮಿಸಿದ್ದರು. ಶಿಬಿರಕ್ಕೆ ಆಗಮಿಸಿದ ಎಲ್ಲ ರೋಗಿಗಳನ್ನು ತಜ್ಞ ವೈದ್ಯರುಗಳು ತಪಾಸಣೆ ನಡೆಸಿದರು.

ಈ ಶಿಬಿರದಲ್ಲಿ ಭಾಗವಹಿಸಿದ ತಜ್ಞ ವೈದ್ಯರು –

1) **ಡಾ. ಹೇಮಂತ ಕಾಮತ,** ಹೃದಯ ರೋಗ ತಜ್ಞರು, ಶಿರಾಲಿ
2) **ಡಾ. ಸತೀಶ ವಿ.ಪ್ರಭು,** ಮಕ್ಕಳ ತಜ್ಞರು, ಕುಮಟಾ
3) **ಡಾ. ಜಿ.ಜಿ.ಹೆಗಡೆ,** ಸ್ತ್ರೀ ರೋಗ ತಜ್ಞರು, ಕುಮಟಾ
4) **ಡಾ. ರವಿ ಎಂ.ಜಿ.,** ದಂತ ತಜ್ಞರು, ಧಾರವಾಡ
5) **ಡಾ. ಎಂ.ಎಲ್.ಫರ್ನಾಂಡಿಸ್,** ಸಾಮಾನ್ಯ ರೋಗ ತಜ್ಞರು, ಅಂಕೋಲಾ

ಈ ಒಂದು ಆರೋಗ್ಯ ತಪಾಸಣಾ ಶಿಬಿರ ನಡೆಸಲು ಹಾಗೂ ಔಷದಿಗಳನ್ನು ನೀಡಲು ಒಟ್ಟು ರೂ.1,00,662/– ಖರ್ಚಾಗಿದ್ದು. ಈ ಶಿಬಿರದ ಪೂರ್ಣ ವೆಚ್ಚವನ್ನು ಪ್ರಾಯೋಜಕರು ನೀಡಿರುತ್ತಾರೆ.

ಎರಡನೇ ಆರೋಗ್ಯ ತಪಾಸಣಾ ಶಿಬಿರವನ್ನು ಕುಮಟಾ ತಾಲೂಕಿನ ಧಾರೇಶ್ವರ ಗ್ರಾಮದಲ್ಲಿ ದಿನಾಂಕ 29–09–2013 ರಂದು ಆಯೋಜಿಸಲಾಗಿತ್ತು. ಆರೋಗ್ಯ ತಪಾಸಣಾ ಶಿಬಿರವನ್ನು ಧಾರೇಶ್ವರದ ಜನತಾ ವಿದ್ಯಾಲಯದ ಆವಾರಣದಲ್ಲಿ ನಡೆಸಲಾಗಿತ್ತು. ಶಿಬಿರಕ್ಕೆ ಬೇಕಾಗುವ ಎಲ್ಲ ವ್ಯವಸ್ಥೆಗಳನ್ನು ಶಾಲೆಯ ಅಭಿವೃದ್ದಿ ಸಮಿತಿಯವರು ಹಾಗೂ ಶಿಕ್ಷಕರು ವಿಶೇಷ ಆಸಕ್ತಿಯಿಂದ ಮಾಡಿದ್ದರು.



ಈ ಶಿಬಿರದಲ್ಲಿ ಧಾರೇಶ್ವರ ಹಾಗೂ ಸುತ್ತಮುತ್ತಲಿನ ಸುಮಾರು 10 ಕಿ.ಮೀ. ದೂರದ ಹಳ್ಳಿಗಳಿಂದ 75 ಗಂಡಸರು ಮತ್ತು 245 ಹೆಂಗಸರು, ಮಕ್ಕಳು ತಪಾಸಣೆಗಾಗಿ ಆಗಮಿಸಿದ್ದರು. ಅವರೆಲ್ಲರಿಗೆ ನುರಿತ ತಜ್ಞ ವೈದ್ಯರಿಂದ ತಪಾಸಣೆ ಮಾಡಿ ಅವರಿಗೆ ಅವಶ್ಯವಿರುವ ಒಂದು ತಿಂಗಳಿಗೆ ಸಾಲುವಷ್ಟು ಔಷಧವನ್ನು ಉಚಿತವಾಗಿ ನೀಡಲಾಯಿತು.

ಮುಂಜಾನೆ 9 ರಿಂದ ಸಂಜೆ 4.00 ರವರೆಗೆ ನಡೆದ ಈ ಶಿಬಿರದಲ್ಲಿ ಎಲ್ಲ ತಜ್ಞ ವೈದ್ಯರು ಎಲ್ಲ ರೋಗಿಗಳಿಗೆ ತಪಾಸಣೆ ಮಾಡಿ ಉಪಯುಕ್ತ ಸಲಹೆ ಸೂಚನೆ ನೀಡಿದ್ದಾರೆ. ತಪಾಸಣೆಗೆ ಬಂದವರಲ್ಲಿ ಅವಶ್ಯವಿದ್ದವರಿಗೆ ರಕ್ತ ತಪಾಸಣೆ, ಇ.ಸಿ.ಜಿ. ಮುಂತಾದವುಗಳನ್ನು ಕೂಡಾ ಉಚಿತವಾಗಿ ಮಾಡಲಾಗಿದೆ.

ಈ ಶಿಬಿರದಲ್ಲಿ ಭಾಗವಹಿಸಿದ ತಜ್ಞ ವೈದ್ಯರು

1) **ಡಾ. ಹೇಮಂತ ಕಾಮತ,** ಹೃದಯ ರೋಗ ತಜ್ಞರು, ಶಿರಾಲಿ
2) **ಡಾ. ಸತೀಶ ವಿ.ಪ್ರಭು,** ಮಕ್ಕಳ ತಜ್ಞರು, ಕುಮಟಾ
3) **ಡಾ. ಜಿ.ಜಿ.ಹೆಗಡೆ,** ಸ್ತ್ರೀ ರೋಗ ತಜ್ಞರು, ಕುಮಟಾ
4) **ಡಾ. ಅಶೀಕ ಭಟ್ಟ, ಹಳಕಾರ, ಕುಮಟಾ.,** ಸಾಮಾನ್ಯ ರೋಗ ತಜ್ಞರು
5) **ಡಾ. ಪ್ರಕಾಶ ಜಿ.ಭಟ್ಟ, ಕುಮಟಾ,** ಇ.ಎನ್.ಟಿ.ತಜ್ಞರು

ಈ ಶಿಬಿರಗಳಲ್ಲಿ E.N.T. ತಜ್ಞರಾದ ಡಾ. ಪ್ರಕಾಶ ಭಟ್ಟ ಅವರು ಗುರುತಿಸಿದ ಇಬ್ಬರು ಮಕ್ಕಳಿಗೆ 1) ಕುಮಾರಿ ವೈಭವಿ ವಿನಾಯಕ ಭಂಡಾರಿ, ವಯಸ್ಸು 15 ಮತ್ತು 2) ಕುಮಾರ ನಾಗರಾಜ ಎಮ್.ಪಟಾಗಾರ, ವಯಸ್ಸು 15 Hearing Aid Instrument ಅವಶ್ಯಕತೆ ಇರುವದಾಗಿ ತಿಳಿಸಿದರು. ಅದಕ್ಕೆ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ತಕ್ಷಣ ಒಪ್ಪಿಗೆ ನೀಡಿದರು. ಅವರಿಬ್ಬರಿಗೂ ರೂ.24,554/– ಬೆಲೆಯ ಆಧುನಿಕ Hearing Aid Instrument ಅಳವಡಿಸಲಾಗಿದೆ.

ಈ ಶಿಬಿರಕ್ಕೆ ತಗಲಿದ ಒಟ್ಟೂ ಖರ್ಚು ರೂ.80,786/– ಪ್ರಾಯೋಜಕರು ನೀಡಿರುತ್ತಾರೆ.

ಕಾರ್ಯಕ್ರಮದ ಪ್ರಾರಂಭದಲ್ಲಿ ಎಲ್ಲ ರೋಗಿಗಳಿಗೆ ಉದ್ದೇಶಿಸಿ ಡಾ.ಹೇಮಂತ ಕಾಮತ, ಡಾ.ಜಿ.ಜಿ.ಹೆಗಡೆ, ಡಾ.ಅಶೋಕ ಭಟ್ಟ, ಹಳಕಾರ ಇವರು ಮಾತನ್ನಾಡಿ, ಶಿಬಿರದ ಅವಶ್ಯಕತೆ ಪ್ರತಿಯೊಬ್ಬ ರೋಗಿಗಳು ಮಾಡಬೇಕಾದ ಕರ್ತವ್ಯ ಸ್ವಚ್ಛತೆ ಬಗ್ಗೆ ಕಾಳಜಿ ವಹಿಸುವದು, ಜೀವನ ಶೈಲಿ, ಆರೋಗ್ಯ ರಕ್ಷಣೆ ಯಾವ ರೀತಿ ಇರಬೇಕು, ಕುಡಿಯುವ ನೀರು ಹೇಗೆ ಉಪಯೋಗಿಸಬೇಕು. ಮುಂತಾದ ಅನೇಕ ವಿಚಾರಗಳ ಕುರಿತು ಅವರಿಗೆ ಮನಮುಟ್ಟುವಂತೆ ತಿಳಿಸಿ ಹೇಳಿದರು. ಶಿಬಿರ ನಡೆಸಿದ ಸಂಘಟಕರಿಗೆ ಪ್ರಾಯೋಜಕರಿಗೆ ಅಭಿನಂದಿಸಿದರು.

ನಮ್ಮ ಜಿಲ್ಲೆಯ ವಿವಿಧ ಭಾಗಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಬೇಕೆಂಬುದು ಪ್ರಾಯೋಜಕರ ಆಶಯವಾಗಿದೆ. ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳ ಮುಖ್ಯಸ್ಥರು ಈ ಯೋಜನೆ ತಮ್ಮ ಭಾಗಗಳಲ್ಲಿ ನೆರವೇರಿಸಲು ಮುಂದೆ ಬಂದರೆ ಶಿಬಿರಗಳನ್ನು ನಡೆಸಲಾಗುವದು.

ಅಗಸ್ಟ ತಿಂಗಳಲ್ಲಿ ಮುಂದಿನ ಆರೋಗ್ಯ ತಪಾಸಣಾ ಶಿಬಿರವನ್ನು ಅನಿಲಗೋಡ (ಹೊನ್ನಾವರ)ದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲ ವೈದ್ಯರುಗಳಿಗೆ, ಪ್ರಾಯೋಜಕರಾದ ಶ್ರೀ ಎಸ್.ಪಿ.ಕಾಮತ, ಅಧ್ಯಕ್ಷರು, ಕ್ರುಗರ್ ಫೌಂಡೇಶನ್, ಕಾರವಾರ, ಮತ್ತು ಶ್ರೀ ದೇವದತ್ತ ಕಾಮತರಿಗೆ ಹಾಗೂ ಎಲ್ಲ ಸಂಘಟಕರಿಗೆ ಹೃತ್ಪೂರ್ವಕವಾಗಿ ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

## 15.ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ

ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ, ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಕುರಿತು ಜಾಗ್ರತೆ ಮೂಡಿಸಿ ಅದರ ವಿರುದ್ಧ ಹೋರಾಟ ಮಾಡುವ ಶಕ್ತಿ ಬರಬೇಕು. ತಮ್ಮ ನಾಯಕತ್ವವನ್ನು ಬೆಳಿಸಿ ಕೊಳ್ಳುವ ಛಲ ಅವರಲ್ಲಿ ಮೂಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು "ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ"ಯನ್ನು ಸುಪ್ರೀಮ್ ಕೋರ್ಟಿನ ಯುವ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ತಮ್ಮ ಅಜ್ಜ ದಿ॥ ಪಿ.ಎಸ್.ಕಾಮತರವರ ಸ್ಮರ್ಣಾರ್ಥ 2011–2012ನೇ ಸಾಲಿನಿಂದ ಪ್ರಾರಂಭಿಸಿದರು. ಈ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ ಮೂರು ಹಂತದಲ್ಲಿ ನಡೆಸಲಾಗುತ್ತಿದೆ. (1) ಕಾಲೇಜು ಮಟ್ಟದಲ್ಲಿ, (2) ತಾಲೂಕಾ ಮಟ್ಟದಲ್ಲಿ ಮತ್ತು (3) ಜಿಲ್ಲಾ ಮಟ್ಟದಲ್ಲಿ. ಈ ಮೂರು ಹಂತದಲ್ಲಿ ಜಯಶಾಲಿ ಆದವರಿಗೆ ಬಹುಮಾನ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದ ಅಂತಿಮ ಸ್ಪರ್ಧೆಗಳಲ್ಲಿ ಮೊದಲನೆ ಸ್ಥಾನ ಪಡೆದವರಿಗೆ ರೂ.50,000/–, ದ್ವಿತೀಯ ಸ್ಥಾನ ಪಡೆದವರಿಗೆ ರೂ.30,000/–, ತೃತೀಯ ಸ್ಥಾನ ಪಡೆದವರಿಗೆ ರೂ.20,000/– ಹಾಗೂ 4 ಮತ್ತು 5ನೇ ಸ್ಥಾನ ಪಡೆದವರಿಗೆ ತಲಾ ರೂ.5,000/– ನೀಡಲಾಗುತ್ತಿದೆ. ಇದರ ಹೊರತಾಗಿ ಅಂತಿಮ ಸುತ್ತಿನಲ್ಲಿ ಭಾಗವಹಿಸುವ ಎಲ್ಲ ಸ್ಪರ್ಧಾಳುಗಳಿಗೆ ಆಕರ್ಷಕ ಇತರೇ ಬಹುಮಾನ ನೀಡಲಾಗುತ್ತಿದೆ.

2011–12ರಲ್ಲಿ ಪ್ರಾರಂಭಿಸಿದ ಪ್ರಥಮ ವರ್ಷದ P.S.Kamat Memorial District Level Inter-Collegiate Debate Competition ದಿವೇಕರ ವಾಣಿಜ್ಯ ಕಾಲೇಜ್, ಕಾರವಾರದಲ್ಲಿ ದಿನಾಂಕ 18–02–2012 ರಂದು ನಡೆಯಿತು.

ಚರ್ಚಾ ವಿಷಯ – **The Proposed Anti-Corruption Laws / Enactments will Eliminate Corruption in India (ಪ್ರಾಸ್ತಾವಿತ ಬ್ರಷ್ಟಾಚಾರ ವಿರೋಧಿ ಕಾನೂನುಗಳು/ ಶಾಸನಗಳು ಭಾರತದಲ್ಲಿ ಬ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತದೆ)**

ಜಿಲ್ಲಾ ಮಟ್ಟದ ಈ ಕಾರ್ಯಕ್ರಮಕ್ಕೆ ಶ್ರೀ ವಿವೇಕ ತನಖಾ, Additional Solicitor General of India, New Delhi ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.







ಈ ಚರ್ಚಾ ಸ್ಪರ್ಧೆಯಲ್ಲಿ ಕುಮಾರಿ ಹೇಮಾ ಶಾಂತಾರಾಮ ನಾಯಕ, ಜಿ.ಸಿ.ಕಾಲೇಜ, ಅಂಕೋಲಾ ಇವರು ಪ್ರಥಮರಾಗಿ, ಕುಮಾರಿ ಅನನ್ಯ ಕೆ.ಭಟ್ಟ, ಎಮ್.ಇ.ಎಸ್.ಚೈತನ್ಯ ಪದವಿ ಪೂರ್ವ ಕಾಲೇಜ್, ಶಿರಸಿ ಇವರು ದ್ವಿತೀಯರಾಗಿ ಹಾಗೂ ಕುಮಾರಿ ದೀಕ್ಷಾ ಪಿ.ಭಟ್ಟ, ಡಾ.ಎ.ವಿ.ಬಾಳಿಗಾ ಪದವಿ ಪೂರ್ವ ಕಾಲೇಜ್, ಕುಮಟಾ ಇವರು ತೃತೀಯ ಸ್ಥಾನ ಪಡೆದರು.

2012–2013 ರಲ್ಲಿ ಎರಡನೆ ಬಾರಿಗೆ ನಡೆದ P.S.Kamat Memorial District Level Inter-Collegiate Debate Competition ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾದಲ್ಲಿ ಜನವರಿ 8 ಮತ್ತು 9, 2013 ರಂದು ನಡೆಸಲಾಗಿತ್ತು.

<u>ಚರ್ಚಾ ವಿಷಯ:</u> **Indian Parliamentary Democracy is a Success Story**
**(ಭಾರತದ ಸಂಸದೀಯ ಪ್ರಜಾಪ್ರಭುತ್ವವು ಒಂದು ಯಶೋಗಾಥೆ)**

ಜಿಲ್ಲಾ ಮಟ್ಟದ ಈ ಸ್ಪರ್ದೆಯಲ್ಲಿ ಅಂಕೋಲಾದ ಜಿ.ಸಿ.ಕಾಲೇಜಿನ ವಿದ್ಯಾರ್ಥಿನಿ ಕು.ಪಂಕಜಾ ಎಸ್.ನಾಯ್ಕ ಇವರು ಪ್ರಥಮರಾಗಿ, ಕುಮಾರಿ ಕೆ.ಕೆ.ಅಪೂರ್ವ, ಆರ್.ಎನ್.ಶೆಟ್ಟಿ ಪದವಿ ಪೂರ್ವ ಕಾಲೇಜ್, ಮುರ್ಡೇಶ್ವರ ದ್ವಿತೀಯರಾಗಿ, ಶ್ರೀ ಸತೀಶ ಹೆಗಡೆ, ಡಾ.ಎ.ವಿ.ಬಾಳಿಗಾ ವಾಣಿಜ್ಯ ಕಾಲೇಜ್, ಕುಮಟಾ ಇವರು ತೃತೀಯರಾಗಿ ಆಯ್ಕೆಯಾಗಿದ್ದರು. ತಾಲೂಕಾ ಮಟ್ಟದಲ್ಲಿ ಆಯ್ಕೆಯಾದ ಎಲ್ಲ 18 ಅಭ್ಯರ್ಥಿಗಳಿಗೆ **Shri Madhav Kamat, M.D., Electronic Automation Pvt. Ltd., Banglore** ಇವರಿಂದ ಒಂದು **Tablet PC** ನೀಡಲಾಯಿತು.

2013–14ನೇ ಸಾಲಿನಲ್ಲಿ 3ನೇ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ದೆ ಜನವರಿ 4 ಮತ್ತು 5 2014ರಂದು ಕಾರವಾರದ ದಿವೇಕರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಜರುಗಿತು.

<u>ಚರ್ಚಾ ವಿಷಯ:</u> **Indian Culture & Law have ensured Liberty Equality, safety and Dignity of Women**
(ಭಾರತದ ಸಂಸ್ಕೃತಿ ಹಾಗೂ ಕಾನೂನು ಮಹಿಳೆಯರ ಸ್ವಾತಂತ್ರ್ಯ, ಸಮಾನತೆ, ಸುರಕ್ಷತತೆ ಮತ್ತು ಘನತೆಗಳನ್ನು ಭದ್ರಪಡಿಸಿವೆ)

ಶ್ರೀಮತಿ ಇಂದಿರಾ ಜೈಸಿಂಗ, Hon'ble Additional Solicitor General of India ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.







ಈ ಚರ್ಚಾ ಸ್ಪರ್ದೆಯಲ್ಲಿ ಕುಮಾರಿ ಭಾಗ್ಯ ಎಸ್.ಭಟ್ಟ, ಶ್ರೀದೇವಿ ಪದವಿ ಪೂರ್ವ ಕಾಲೇಜ್, ಹುಲೇಕಲ ಶಿರಸಿ ಇವರು ಪ್ರಥಮ ಸ್ಥಾನ, ಶ್ರೀ ಸಜಿದ ದಫೇದಾರ, ಸರಕಾರಿ ಪದವಿ ಪೂರ್ವ ಕಾಲೇಜ್, ಕಾರವಾರ ಇವರು ದ್ವಿತೀಯ ಸ್ಥಾನ ಹಾಗೂ ಕುಮಾರಿ ಕೆ.ಕೆ.ಅಪೂರ್ವ, ಆರ್.ಎನ್.ಎಸ್.ಪದವಿ ಪೂರ್ವ ಕಾಲೇಜ್ ಇವರು ತೃತೀಯ ಸ್ಥಾನ ಪಡೆದರು. ತಾಲೂಕಾ ಮಟ್ಟದಲ್ಲಿ ಆಯ್ಕೆಯಾದ ಎಲ್ಲ 18 ಅಭ್ಯರ್ಥಿಗಳಿಗೆ **Shri Madhav Kamat, M.D., Electronic Automation Pvt. Ltd., Banglore** ಇವರಿಂದ ಒಂದು **Tablet PC** ನೀಡಲಾಯಿತು.

2014–2015ನೇ ಸಾಲಿನ 4ನೇ ವರ್ಷದ ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆಯು ಡಿಸೆಂಬರ್/ಜನವರಿ ತಿಂಗಳಲ್ಲಿ ನಡೆಸುವಂತೆ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರು ತಿಳಿಸಿರುತ್ತಾರೆ.

ಈ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರಿಗೆ ಹಾಗೂ ಸಂಘಟಕರಿಗೆಲ್ಲರಿಗೂ ನಾನು ಟ್ರಸ್ಟಿನ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

## 16. Project Change Makers for a Better Tomorrow (ಉತ್ತಮ ನಾಳೆಗಾಗಿ ಪರಿವರ್ತನಾಗಾರರು)

ಉತ್ತಮ ನಾಳೆಗಾಗಿ ಪರಿವರ್ತನಾಗಾರರು ಎಂಬ ಸಂಕಲ್ಪದ ಅಡಿಯಲ್ಲಿ ಕಾರವಾರದ ಕುಗ್ರರ ಫೌಂಡೇಶನ ಸಂಸ್ಥೆಯು ಕೆನರಾ ವೆಲ್ ಫೇರ್ ಟ್ರಸ್ಟಿನ ಮೂಲಕ ಕೈಗೆತ್ತಿಕೊಂಡ "Project Change Makers for a Better Tomorrow" ಎಂಬ ಒಂದು ವಿನೂತನವಾದ ಯೋಜನೆಯ ಮೊದಲ ಹಂತದ ತರಬೇತಿ ಶಿಬಿರವನ್ನು ಜನವರಿ 2008ರಲ್ಲಿ ಪ್ರಾರಂಭವಾಗಿ ಎಪ್ರೀಲ 2010 ರಂದು ಯಶಸ್ವಿಯಾಗಿ ಮುಕ್ತಾಯಗೊಳಿಸಿದೆ.




3 ವರ್ಷದ ಕಾಲಾವಧಿಯ ಈ ಯೋಜನೆಯನ್ನು ರೂಪಿಸಿ ಮಕ್ಕಳಿಗೆ ತರಬೇತು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರಥಮ ಹಂತದ ಈ ಯೋಜನೆಯ ಲಾಭ ಉತ್ತರ ಕನ್ನಡ ಜಿಲ್ಲೆಯ 125 ಮಕ್ಕಳು ಪಡೆದಿರುತ್ತಾರೆ. ಪ್ರಥಮ ಹಂತದ ಈ ಯೋಜನೆಗೆ ತಗಲಿದ ಒಟ್ಟೂ ವೆಚ್ಚ ರೂ.20,25,000/–.

Project Change Makers for a Better Tomorrow - ಎರಡನೇ ಹಂತದ 3 ವರ್ಷದ ಕಾಲಾವಧಿಯ ಈ ಯೋಜನೆ 15–09–2010 ರಂದು ಪ್ರಾರಂಭವಾಗಿ ದಿನಾಂಕ 18–07–2013 ರಂದು ಮುಕ್ತಾಯಗೊಂಡಿದೆ. ಈ ಯೋಜನೆಯ ಅಡಿಯಲ್ಲಿ ಜಿಲ್ಲೆಯ 50 ವಿದ್ಯಾರ್ಥಿಗಳು ಆಯ್ಕೆಗೊಂಡು 3 ವರ್ಷದ ಅವಧಿಯಲ್ಲಿ ನಡೆಸಿದ 10 ಶಿಬಿರಗಳಲ್ಲಿ ವಿಶೇಷ ತರಬೇತಿ ಪಡೆದಿರುತ್ತಾರೆ. ಎರಡನೇ ಹಂತದ ಈ ಯೋಜನೆಗೆ ತಗಲಿದ ಒಟ್ಟು ವೆಚ್ಚ ರೂ.12,64,327/–.




ಕಳೆದ 6 ವರ್ಷಗಳ ಅವಧಿಯಲ್ಲಿ, 3 ವರ್ಷ ಅವಧಿಯ ಎರಡು Change Makers ತಂಡದ ತರಬೇತಿ ಶಿಬಿರಗಳು ಮುಕ್ತಾಯವಾಗಿದ್ದು, ಈ ಯೋಜನೆಗೆ ಇದುವರೆಗೆ ಒಟ್ಟು ರೂ.32,89,327/– ಖರ್ಚಾಗಿದ್ದು ಅದರ ಸಂಪೂರ್ಣ ವೆಚ್ಚವನ್ನು ಕ್ರುಗರ್ ಫೌಂಡೇಶನ್, ಕಾರವಾರ, ನೀಡಿದೆ.

ಮೂರನೆ ಹಂತದ ಈ ಯೋಜನೆಯ ಅಂತಿಮ ಆಯ್ಕೆ ದಿನಾಂಕ 03–09–2013 ರಂದು ಕಾರವಾರದ ಬಾಲ ಮಂದಿರ ಶಾಲೆಯಲ್ಲಿ ಜರುಗಿತು. ಅಂತಿಮ ಆಯ್ಕೆಯಲ್ಲಿ ಪಾಲ್ಗೊಂಡ 100 ವಿದ್ಯಾರ್ಥಿಗಳಲ್ಲಿ 60 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು.




- ಪ್ರಥಮ ಶಿಬಿರವನ್ನು ಅಂಕೋಲೆಯ ಗೋಖಲೆ ಸೆಂಟನರಿ ಕಾಲೇಜಿನಲ್ಲಿ ಅಕ್ಟೋಬರ 25 ರಿಂದ 27 ರವರೆಗೆ 3 ದಿವಸದ ಕಾಲ ನಡೆಸಲಾಯಿತು.

- ಎರಡನೇ ಶಿಬಿರವನ್ನು ಕುಮಟಾ ತಾಲೂಕಿನ ಶ್ರೀ ಗೋರೆ ಗೋಪಾಲಕೃಷ್ಣ ದೇವಸ್ಥಾನದ ಆವಾರದಲ್ಲಿ ಹಾಗೂ ಶ್ರೀ ಮಹಿಶಾಸುರ ಮರ್ಧಿನಿ ದೇವಸ್ಥಾನ, ಗುಡಬಳ್ಳಿ ಕುಮಟಾದಲ್ಲಿ ಜನವರಿ 17 ರಿಂದ 19 ರವರೆಗೆ 3 ದಿವಸ ನಡೆಸಲಾಯಿತು.

- ಮೂರನೆ ಶಿಬಿರವನ್ನು ಅಣಶಿ ನ್ಯಾಶನಲ್ ಪಾರ್ಕನಲ್ಲಿ ಎಪ್ರೀಲ್ ತಿಂಗಳ 5 ರಿಂದ 7ನೇ ತಾರೀಖಿನವರೆಗೆ 3 ದಿವಸ ನಡೆಸಲಾಯಿತು.

- ನಾಲ್ಕನೇ ಶಿಬಿರವನ್ನು ಜೋಗಪಾಲ್ಸನಲ್ಲಿ ಜುಲೈ ತಿಂಗಳ 5 ರಿಂದ 7ರ ವರೆಗೆ 3 ದಿವಸ ನಡೆಸಲಾಯಿತು. ಶಿಭಿರಾರ್ಥಿಗಳು ಅತ್ಯಂತ ಉತ್ಸಾಹದಿಂದ ಶಿಬಿರದಲ್ಲಿ ಭಾಗವಹಿಸಿ ಅದರ ಪ್ರಯೋಜನ ಪಡೆದರು.

ಈ ಶಿಬಿರಗಳನ್ನು ನಡೆಸಲು ಸಹಕಾರ ನೀಡಿದ ಎಲ್ಲರಿಗೆ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಎಲ್ಲರಿಗೆ ಹಾಗೂ ಕ್ರೂಗರ ಫೌಂಡೇಶನ ಮತ್ತು ಟ್ರಸ್ಟಿನ ಅಧ್ಯಕ್ಷರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

## 'ಪರಿವರ್ತನ'

"ಉತ್ತಮ ನಾಳೆಗಾಗಿ ಪರಿವರ್ತನಗಾರರು" ಈ ಯೋಜನೆಯ ಅಡಿಯಲ್ಲಿ 3 ತಿಂಗಳಿಗೊಮ್ಮೆ Orientation Retreat ಶಿಬಿರಗಳನ್ನು ಜಿಲ್ಲೆಯ ಬೇರೆ ಬೇರೆ ಭಾಗದಲ್ಲಿ ನಡೆಸಲಾಗುತ್ತಿದ್ದು, ಪ್ರತಿಯೊಂದು ಶಿಬಿರ ಮುಗಿದ ಮೇಲೆ Change Makers ವಿದ್ಯಾರ್ಥಿಗಳು ಶಿಬಿರದ ಕುರಿತು ನೀಡಿದ ಮಾಹಿತಿಗಳ ಆಧಾರದ ಮೇಲೆ ಶಿಬಿರದ ಪೂರ್ತಿ ವಿವರವನ್ನೊಳಗೊಂಡ **"ಪರಿವರ್ತನ"** ಎಂಬ Newsletterನ್ನು ತಯಾರಿಸಿ, CMG ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಅದರ ಪ್ರತಿಯನ್ನು ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.









## 17.ಒಂದು ದಿವಸದ ಕಾರ್ಯಗಾರ ಮತ್ತು ಉಪನ್ಯಾಸ ಮಾಲೆ – (ಇಂಡಿಯನ್ ಸಿವಿಲ್ ಸರ್ವಿಸ ಮತ್ತು ಸ್ಪರ್ಧಾತ್ಮಕ ಪರೀಕ್ಷೆ) One-Day Workshop & Special Lecture Series on Indian Civil Services & Competitive Exams

ಈ ವಿಷಯದ ಕುರಿತು ಒಂದು ದಿವಸದ ಕಾರ್ಯಗಾರವನ್ನು ಕೆನರಾ ವೆಲ್ ಫೆರ್ ಟ್ರಸ್ಟು ಮತ್ತು ಕೆನರಾ ಕಾಲೇಜ್ ಸೊಸೈಟಿ ಕುಮಟಾ ಇವರ ಸಹಯೋಗದಿಂದ ಕುಮಟಾದ ಡಾ.ಎ.ವಿ.ಬಾಳಿಗಾ ಕಾಲೇಜಿನಲ್ಲಿ ದಿನಾಂಕ 21–12–2013 ರಂದು ನಡೆಸಲಾಗಿತ್ತು. ಈ ಕಾರ್ಯಗಾರದಲ್ಲಿ ಭಾಗವಹಿಸಲು ಉತ್ತರ ಕನ್ನಡ ಜಿಲ್ಲೆಯ ವಿವಿಧ ತಾಲೂಕಗಳಿಂದ ವಿವಿಧ ಕಾಲೇಜುಗಳಿಂದ 417 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಕಾರ್ಯಗಾರದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಸಿವಿಲ್ ಸರ್ವಿಸ್ ಪರೀಕ್ಷೆಯ ಸಿಲೆಬಸ್ ಹಾಗೂ ಇನ್ನಿತರ ಮಾಹಿತಿಯನ್ನು ಒಳಗೊಂಡ ಪುಸ್ತಕ ಕಿಟ್ ಜೊತೆಗೆ ನೀಡಲಾಯಿತು.

ಈ ಕಾರ್ಯಗಾರದಲ್ಲಿ **ಶ್ರೀ ಸಿದ್ದಾರ್ಥ ಶರ್ಮಾ,** I.F.A., President's Secretariat, New Delhi, **ಶ್ರೀಮತಿ ಸ್ನಿತಾ ವತ್ಸ ಶರ್ಮಾ,** I.I.S., ಇಂಡಿಯನ್ ಇನ್‌ಫಾರ್ಮೆಶನ್ ಸರ್ವಿಸ್, ನ್ಯೂಡೆಲ್ಲಿ, **ಶ್ರೀ ವಿ.ವಿ.ಭಟ್ಟ,** I.A.S., ಕೇಂದ್ರ ಸರಕಾರದ Former Secretary Finance, New Delhi ಮತ್ತು **ಶ್ರೀ ಕುರ್ಮರಾವ ಎಮ್.** I.A.S., Assistant Commissioner ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಇಂಡಿಯನ್ ಸಿವಿಲ್ ಸರ್ವಿಸ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾಗುವ ಅರ್ಹತೆ, ಪರೀಕ್ಷೆ ಎದುರಿಸುವ ಕೌಶಲ್ಯತೆ, ಅಭ್ಯಾಸ ಮಾಡುವ ಕ್ರಮ, ಮಾಹಿತಿ ಸಂಗ್ರಹಣೆ ಮುಂತಾದ ಅನೇಕ ವಿಷಯದ ಕುರಿತು ಮಾಹಿತಿ ನೀಡಿದರು.











ಕೆನರಾ ವೆಲ್ ಫೆರ್ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರು ಈ ಕಾರ್ಯಗಾರದ ಉದ್ಘಾಟನೆ ನೆರವೇರಿಸಿದರು. ಶ್ರೀ ಎ.ಪಿ.ಶಾನಭಾಗ, ಉಪಾಧ್ಯಕ್ಷರು, ಕೆನರಾ ಕಾಲೇಜ್ ಸೊಸೈಟಿ ಇವರು ಅಧ್ಯಕ್ಷತೆ ವಹಿಸಿದ್ದರು. ಮುಕ್ತಾಯ ಸಮಾರಂಭದಲ್ಲಿ ಈ ಕಾರ್ಯಗಾರದ ಪ್ರಾಯೋಜಕರಾದ

ಶ್ರೀ ದೇವದತ್ತ ಕಾಮತ, ನ್ಯಾಯವಾದಿಗಳು, ಸುಪ್ರೀಮ ಕೋರ್ಟ, ನ್ಯೂದೆಲ್ಲಿ ಅವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ವಿ.ವಿ.ಭಟ್ಟ, I.A.S, Former Secretary, Govt. of India (Finance) ಅವರು ಮುಖ್ಯ ಅತಿಥಿಯರಾಗಿ ಭಾಗವಹಿಸಿದ್ದರು. ಶ್ರೀ ಎಸ್.ಪಿ.ಕಾಮತರವರು ಅಧ್ಯಕ್ಷತೆ ವಹಿಸಿದ್ದರು. ಈ ಕಾರ್ಯಗಾರವು ಅತ್ಯಂತ ಯಶಸ್ವಿಯಾಗಿ ಜರುಗಿತು.


## 18.ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ಸಂಸ್ಕೃತ ಸೌರಭ ಕಾರ್ಯಕ್ರಮ

ದಿ. ಗಣಪತಿ ಅಣ್ಣಪ್ಪಯ್ಯ ಪೈ ಸ್ಮರಣಾರ್ಥ ದಿನಾಂಕ 06–12–2013 ರಂದು ಪಿ.ಎಮ್.ಜ್ಯೂನಿಯರ ಕಾಲೇಜ್, ಅಂಕೋಲಾದಲ್ಲಿ ಸಂಸ್ಕೃತ ಸೌರಭ ಹಾಗೂ ಭಗವದ್ಗೀತಾ ಕಂಠಪಾಠ ಸ್ಪರ್ದೆ ಕಾರ್ಯಕ್ರಮವನ್ನು ಟ್ರಸ್ಟಿನ ಪರವಾಗಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಾಥಮಿಕ ವಿಭಾಗದ 19 ವಿದ್ಯಾರ್ಥಿಗಳು ಹಾಗೂ ಪ್ರೌಢಶಾಲಾ ವಿಭಾಗದಿಂದ 22 ವಿದ್ಯಾರ್ಥಿಗಳು ಒಟ್ಟೂ 41 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸ್ವಾಮಿ ಅಂಬಿಕಾನಂದಪುರಿ ಮಹಾರಾಜ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀಮದಬ್ಭವದ್ಗೀತೆಯು ಮನುಷ್ಯನ ಹೃದಯವನ್ನು ಸಂಸ್ಕರಿಸಿ ಅವನನ್ನು ಹೊಸಬೆಳಕಿನ ಕಡೆಗೆ ಒಯ್ಯುತ್ತದೆ ಎಂದು ತಿಳಿಸಿದರು. ಆದ್ಯಾತ್ಮಿಕ ಚಿಂತಕರಾದ ಶ್ರೀ ನಾರಾಯಣ ಹೆಗಡೆ ಗಡಿಕೈ, ಶಿರಸಿ ಅವರು ಮುಖ್ಯ ಅತಿಥಿಯರಾಗಿ ಆಗಮಿಸಿ ಇಂದಿನ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಲು ಭಗವದ್ಗೀತೆಯು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.





ಈ ಕಾರ್ಯಕ್ರಮದಲ್ಲಿ ಅಂಕೋಲಾ ತಾಲೂಕ ಭಗವದ್ಗೀತಾ ಅಭಿಯಾನ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ.ಪಿ.ಭಟ್ಟರವರು, ಉಪಾಧ್ಯಕ್ಷರಾದ ಶ್ರೀ ರವೀಂದ್ರ ಕೇಣಿಯವರು ಹಾಗೂ ಟ್ರಸ್ಟಿನ ಆಡಳಿತಾಧಿಕಾರಿಗಳಾದ ಶ್ರೀ ಕೃಷ್ಣಾನಂದ ವಿ.ಶೆಟ್ಟಿಯವರು ಪಾಲ್ಗೊಂಡಿದ್ದರು. ಪಿ.ಎಂ.ಹೈಸ್ಕೂಲಿನ ಸಹ ಶಿಕ್ಷಕರಾದ ಶ್ರೀ ನಾಗಪತಿ ಹೆಗಡೆಯವರ ಸಹಕಾರದಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ವಿಜೇತರಾದ ಪ್ರಾಥಮಿಕ ಮತ್ತು ಮಾದ್ಯಮಿಕ ವಿಭಾಗದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.


ಈ ಕಾರ್ಯಕ್ರಮ ಆಯೋಜಿಸುವಂತೆ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಸಲಹೆ ನೀಡಿದ್ದಲ್ಲದೆ ಪ್ರತಿವರ್ಷ ಜಿಲ್ಲೆಯ ಉಳಿದ ತಾಲೂಕುಗಳಲ್ಲಿ ನಡೆಸುವಂತೆ ತಿಳಿಸಿ ಪ್ರೊತ್ಸಾಹಿಸಿರುತ್ತಾರೆ ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ.

## 19.ಟ್ರಸ್ಟಿಗೆ ಬರುವ ಆದಾಯದ ಕುರಿತು

### 1. ತೋಟದ ಉತ್ಪನ್ನ

ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳಲ್ಲಿ ಬರುವ ತೋಟದ ಉತ್ಪನ್ನವನ್ನು ಟ್ರಸ್ಟಿಗೆ ಪಾವತಿಸುವಂತೆ ಈ ಹಿಂದಿನ ವರ್ಷಗಳಲ್ಲಿ ವಿನಂತಿಸಲಾಗಿತ್ತು. ಟ್ರಸ್ಟಿಗೆ ಸಂದಾಯವಾದ ತೋಟದ ಉತ್ಪನ್ನ ಈ ಕೆಳಗಿನಂತಿರುತ್ತದೆ.

| ವರ್ಷ | ಸಂದಾಯವಾದ ಹಣ |
|---|---|
| 2009-2010 | Rs.85,750 |
| 2010-2011 | Rs.1,10,283 |
| 2011-2012 | Rs.1,53,310 |
| 2012-2013 | Rs.1,37,219 |
| 2013-2014 | Rs.1,60,130 |





ಕಳೆದ ವರ್ಷಕ್ಕಿಂತ 2013–14ನೇ ಸಾಲಿನಲ್ಲಿ ತೋಟದ ಉತ್ಪನ್ನ ಸ್ವಲ್ಪ ಹೆಚ್ಚಿಗೆ ಆಗಿದೆ. ಆದರೆ ಜನತಾ ವಿದ್ಯಾಲಯ, ಕಡವಾಡ ಹಾಗೂ ಜನತಾ ವಿದ್ಯಾಲಯ, ಮುದಗಾ ಶಾಲೆಯಿಂದ ಯಾವದೇ ಉತ್ಪನ್ನ ಬಂದಿರುವದಿಲ್ಲ. ಉಳಿದ ಎಲ್ಲ ಶಾಲಾ–ಕಾಲೇಜುಗಳಿಂದ ತೋಟದ ಉತ್ಪನ್ನ ಬಂದಿರುತ್ತದೆ. ಬರುವ ವರ್ಷ ಈ ಶಾಲೆಯವರು ಕೂಡಾ ಹೆಚ್ಚಿನ ಪ್ರಯತ್ನ ಮಾಡಿ ತೋಟದ ಉತ್ಪನ್ನ ಟ್ರಸ್ಟಿಗೆ ಜಮಾ ಮಾಡುವಂತೆ ಪ್ರಯತ್ನಿಸಲು ವಿನಂತಿಸಿದೆ.

ಜನತಾ ವಿದ್ಯಾಲಯ ಕುಳವೆ–ಬರೂರ, ಬೇಡಕಣಿ, ಮುರ್ಡೇಶ್ವರ, ಎಸ್.ಕೆ.ಪಿ.ಹೈಸ್ಕೂಲ, ಕತಗಾಲ ಶಾಲೆಯಿಂದ ಬಂದ ತೋಟದ ಉತ್ಪನ್ನ ತೀರಾ ಕಡಿಮೆ ಆಗಿದ್ದು, ಈ ಶೈಕ್ಷಣಿಕ ವರ್ಷದಲ್ಲಿ ತೋಟದ ಉತ್ಪನ್ನ ಹೆಚ್ಚಿಗೆ ಬರುವಂತೆ ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಎಲ್ಲ ಸಿಬ್ಬಂದಿಗಳು ವಿಶೇಷ ಪ್ರಯತ್ನ ಮಾಡಬೇಕು.

## 2. ವಸತಿ ಗ್ರಹದ ಬಾಡಿಗೆ / ಅಂಗಡಿ ಬಾಡಿಗೆ / ಹೊನ್ನೇಕೇರಿ ಹಾಸ್ಟೆಲ್ ಬಾಡಿಗೆ

| ವರ್ಷ | ಸಂದಾಯವಾದ ಬಾಡಿಗೆ ಮೊತ್ತ |
|---|---|
| 2007-2008 | Rs.2,10,397 |
| 2008-2009 | Rs.2,50,034 |
| 2009-2010 | Rs.2,87,788 |
| 2010-2011 | Rs.3,19,896 |
| 2011-2012 | Rs.3,51,172 |
| 2012-2013 | Rs.3,83,227 |
| 2013-2014 | Rs.4,38,072 |




2013–14ನೇ ಸಾಲಿನಲ್ಲಿ ಬಾಡಿಗೆ ರೂಪದಲ್ಲಿ ರೂ.4,38,072/– ಬಂದಿದೆ.


ಜನತಾ ವಿದ್ಯಾಲಯ, ಮುರ್ಡೇಶ್ವರ ಶಾಲೆಯ ಆವಾರದಲ್ಲಿರುವ ಮೂರು ವಸತಿ ಗೃಹಗಳಲ್ಲಿ ಎರಡು ವಸತಿ ಗೃಹದಲ್ಲಿ ಸಿಬ್ಬಂದಿಗಳು ವಾಸವಾಗಿದ್ದಾರೆ. ಇನ್ನೊಂದು ವಸತಿಗೃಹದಲ್ಲಿ ಕೂಡಲೆ ವಾಸ ಮಾಡುವ ವ್ಯವಸ್ಥೆ ಮುಖ್ಯಾಧ್ಯಾಪಕರು ಮಾಡಬೇಕು. ಶಾಲಾ / ಕಾಲೇಜು ಆವಾರದಲ್ಲಿರುವ ಟ್ರಸ್ಟಿನ ಎಲ್ಲ ಕಟ್ಟಡಗಳ ನಿರ್ವಹಣೆ ಹಾಗೂ ಪಂಚಾಯತ / ನಗರ ಸಭೆ ಕರ ತುಂಬುವದು ಟ್ರಸ್ಟಿನಿಂದಲೆ ಮಾಡಲಾಗುತ್ತಿದೆ.

### 3. ರೂಪೀ ರಿಸರ್ವ್ ಫಂಡ

ಟ್ರಸ್ಟಿನ ಯೋಜನೆಯಲ್ಲೊಂದಾದ 'ರೂಪೀ ರಿಝರ್ವ್ ಫಂಡ' ನಿಧಿಗೆ ಸ್ವಯಂ ಪ್ರೇರಣೆಯಿಂದ ವಿದ್ಯಾರ್ಥಿಗಳಿಂದ, ಶಿಕ್ಷಕರಿಂದ ಮತ್ತು ಶಿಕ್ಷಕೇತರ ಸಿಬ್ಬಂದಿಯವರಿಂದ ಶೈಕ್ಷಣಿಕ ವರ್ಷದಲ್ಲಿ ವರ್ಷಕ್ಕೆ ರೂ.100/– ಸಂಗ್ರಹಿಸಿದ ಹಣವನ್ನು ಟ್ರಸ್ಟಿಗೆ ಕಳೆದ ಅನೇಕ ವರ್ಷಗಳಿಂದ ಜಮೆ ಮಾಡಲಾಗುತ್ತಿತ್ತು.

ರೂಪಾಯಿ ಮೌಲ್ಯ ಕುಸಿತದಿಂದಾಗಿ ಮತ್ತು ಅಭಿವೃದ್ಧಿ ಕೆಲಸಗಳ ಒತ್ತಡ ಹೆಚ್ಚುತ್ತಿರುವ ಕಾರಣದಿಂದ ಈಗ ಸಂಗ್ರಹಿಸುತ್ತಿರುವ ರೂಪೀ ರಿಝರ್ವ್ ಫಂಡ ಹಣ ಏನು ಸಾಲದ್ದರಿಂದ ಕಳೆದ ವರ್ಷ ನಡೆದ ವಾರ್ಷಿಕ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಎಲ್ಲರ ಸಲಹೆ ಪಡೆದು ರೂಪೀ ರಿಝರ್ವ್ ಫಂಡಿನಿಂದ ಸಂಗ್ರಹಿಸುವ ಸ್ವಯಂಪ್ರೇರಣೆ ವಂತಿಗೆ ಹಣವನ್ನು ಮರುನಿಗದಿಪಡಿಸಿದ್ದರು. 2013–14ನೇ ಸಾಲಿನಲ್ಲಿ ಮರುನಿಗದಿಪಡಿಸಿದಂತೆ ಹಣ ಸಂಗ್ರಹ ಮಾಡಿ ಟ್ರಸ್ಟಿನ ಎಲ್ಲ ಶಾಲಾ–ಕಾಲೇಜುಗಳ ಮುಖ್ಯಸ್ಥರು ಟ್ರಸ್ಟಿಗೆ ಜಮಾ ಮಾಡಿದ್ದು ಇರುತ್ತದೆ.

| ವರ್ಷ | ರೂಪೀ ರಿಸರ್ವ್ ಫಂಡ ಸಂಗ್ರಹಣೆ |
|---|---|
| 2010-2011 | Rs.9,18,350 |
| 2011-2012 | Rs.9,74,700 |
| 2012-2013 | Rs.9,57,250 |
| 2013-2014 | Rs.19,26,700 |



2013–14ನೇ ಸಾಲಿನಲ್ಲಿ ಸಂಗ್ರಹಿಸಿದ ಒಟ್ಟೂ ಹಣ ರೂ.19,26,700/– ಈ ಸಂಗ್ರಹಣೆಯಲ್ಲಿ ಸಹಕರಿಸಿ ಎಲ್ಲ ಪ್ರಾಚಾರ್ಯರನ್ನು/ಮುಖ್ಯಾಧ್ಯಾಪಕರನ್ನು ಅಭಿನಂದಿಸುತ್ತೇನೆ. ಈ ಯೋಜನೆಯಲ್ಲಿ ತಮ್ಮ ಸಹಕಾರ ನಿರಂತರವಾಗಿ ಮುಂದುವರೆಯಲೆಂದು ಆಶಿಸುತ್ತೇನೆ.

ಸಂಗ್ರಹಿಸಿದ ಈ ಹಣವನ್ನು ರಿಸರ್ವ ಫಂಡ ಖಾತೆಗೆ ಶಾಶ್ವತ ನಿಧಿಯಾಗಿ ವಿನಿಯೋಗಿಸಬೇಕಾಗುತ್ತದೆ. ಆದರೆ ಶಾಲಾ–ಕಾಲೇಜುಗಳ ನಿರ್ವಹಣೆ ವೆಚ್ಚಕ್ಕಾಗಿ, ಅಭಿವೃದ್ಧಿ ಕಾರ್ಯಕ್ಕೆ, ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇನ್ನಿತರ ಕಾರ್ಯಗಳಿಗೆ ಟ್ರಸ್ಟು ಈ ಹಣ ವಿನಿಯೋಗಿಸುವದರಿಂದ ರೂಫಿ ರಿಸರ್ವ ಫಂಡ ನಿಂದ ಸಂಗ್ರಹವಾಗುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಲಿಲ್ಲ. ಟ್ರಸ್ಟಿಗೆ ಬರುವ ಆದಾಯ, ದೇಣಿಗೆ ಹೆಚ್ಚಾದಲ್ಲಿ ಈ ಹಣವನ್ನು ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಬಹುದು. ಟ್ರಸ್ಟಿಗೆ ಬರುವ ಆದಾಯ ಇನ್ನೂ ಹೆಚ್ಚಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿ ವಿನಂತಿಸುತ್ತೇನೆ. ಟ್ರಸ್ಟಿಗೆ ಬರುವ ಆದಾಯ ಪ್ರತಿ ವರ್ಷ ರೂ.50 ಲಕ್ಷ ದಷ್ಟಾದರೆ, ಟ್ರಸ್ಟು Rupee Reserve Fund ಹಣ ಹಾಗೂ ಇತರೆ ಉದ್ದೇಶಕ್ಕಾಗಿ ಬರುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಿದೆ.

## 20. 2013–2014ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ–ಬೋಧಕೇತರರು

| | | |
|---|---|---|
| 1 | **ಶ್ರೀಮತಿ ರಾಧಿಕಾ ಹೊನ್ನಾವರ**<br>ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಕಾಸರಕೋಡ, ಇವರು ದಿನಾಂಕ 30–04–2013 ರಂದು ಸೇವಾ ನಿವೃತ್ತಿ ಹೊಂದಿರುತ್ತಾರೆ. |  |
| 2 | **ಶ್ರೀ ವಿ.ಎಸ್.ಮೊಗೇರ**<br>ಪ್ರಥಮ ದರ್ಜೆ ಸಹಾಯಕರು ದಿ.31–05–2013 ರಂದು ಜ.ವಿ. ಸಂಯುಕ್ತ ಪ.ಪೂ.ಕಾಲೇಜ್, ಶಿರಾಲಿಯಿಂದ ಸೇವಾ ನಿವೃತ್ತಿ ಹೊಂದಿರುತ್ತಾರೆ. |  |
| 3 | **ಶ್ರೀಮತಿ ಎಚ್.ಎಚ್.ಶೇಖ**<br>ಹಿರಿಯ ಸಹಾಯ ಶಿಕ್ಷಕಿ, ಉರ್ದು ಮಾಧ್ಯಮ ಪಿ.ಎಂ.ಹೈಸ್ಕೂಲ, ಅಂಕೋಲಾ ಇವರು ದಿನಾಂಕ 31–05–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 4 | **ಶ್ರೀ ಎಂ.ಕೆ.ಮುಕ್ರಿ**<br>ಜವಾನ ಜನತಾ ವಿದ್ಯಾಲಯ, ಕಾಸರಕೋಡ, ಇವರು ದಿನಾಂಕ 31–05–2013ರಂದು ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. |  |

| | | |
|---|---|---|
| 5 | **ಶ್ರೀ ರಾಮಾ ಬೀರಾ ಗೌಡ**<br>ಜವಾನ, ಎಸ್.ಕೆ.ಪಿ.ಹೈಸ್ಕೂಲ, ಕತಗಾಲ, ಇವರು ದಿನಾಂಕ 31–05–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 6 | **ಪ್ರೊ. ಎಸ್.ಡಿ.ನಾಯ್ಕ**<br>ಉಪನ್ಯಾಸಕರು, ದಿವೇಕರ ಕಾಲೇಜ್, ಕಾರವಾರ, ಇವರು ದಿನಾಂಕ 31–05–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 7 | **ಶ್ರೀ ಆನಂದು ಕೆ.ಥಾಮಸೆ**<br>ಜವಾನರು, ದಿವೇಕರ ಕಾಲೇಜ್, ಕಾರವಾರ, ಇವರು ದಿನಾಂಕ 31–08–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 8 | **ಶ್ರೀಮತಿ ಸುಷ್ಮಾ ಜಿ.ಹಳದೀಪುರ**<br>ಸಹಶಿಕ್ಷಕರು, ಜನತಾ ವಿದ್ಯಾಲಯ, ಕಡವಾಡ, ಇವರು ದಿನಾಂಕ 30–09–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 9 | **ಶ್ರೀಮತಿ ಸರಸ್ವತಿ ನಾಯ್ಕ**<br>ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಕಾಸರಕೋಡ, ಇವರು ದಿನಾಂಕ 31–10–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 10 | **ಶ್ರೀಮತಿ ಶೀಲಾ ಜಿ.ನಾಡಕರ್ಣಿ**<br>ಸಹಶಿಕ್ಷಕರು, ಇಂಗ್ಲೀಷ ಮೀಡಿಯಮ್ ಸ್ಕೂಲ, ದಾಂಡೇಲಿ, ಇವರು ದಿನಾಂಕ 31–10–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 11 | **ಡಾ. ಶಾಂತಿ ಎಚ್.ನಾಯಕ**<br>ಕನ್ನಡ ಉಪನ್ಯಾಸಕರು, ಜಿ.ಸಿ.ಕಾಲೇಜ್, ಅಂಕೋಲಾ ಇವರು ದಿನಾಂಕ 31–10–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 12 | **ಶ್ರೀ ಯಲ್ಲಪ್ಪಾ ಧೊಂಗಡೆ**<br>ವೃತ್ತಿಶಿಕ್ಷಕರು, ಜನತಾ ವಿದ್ಯಾಲಯ, ಕುಳವೆ–ಬರೂರ, ಇವರು ದಿನಾಂಕ 30–11–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |

| | | |
|---|---|---|
| 13 | **ಶ್ರೀ ವಿಶ್ವನಾಥ ಗಾಂವಕರ**<br>ಅಟೆಂಡರ, ಜನತಾ ವಿದ್ಯಾಲಯ, ದಾಂಡೇಲಿ, ಇವರು ದಿನಾಂಕ 31–03–2014ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 14 | **ಶ್ರೀ ಎಮ್.ಎಮ್.ನಾಯ್ಕ**<br>ದ್ವಿತೀಯ ದರ್ಜೆ ಸಹಾಯಕರು, ಜನತಾ ವಿದ್ಯಾಲಯ, ಕಡವಾಡ, ಇವರು ದಿನಾಂಕ 31–03–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 15 | **ಶ್ರೀ ಎನ್.ಕೆ.ಭಟ್ಟ**<br>ಇಂಗ್ಲೀಷ ಉಪನ್ಯಾಸಕರು, ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ದಾಂಡೇಲಿ ಇವರು ದಿನಾಂಕ 30–04–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 16 | **ಶ್ರೀಮತಿ ಉಷಾ ಎನ್.ನಾಯಕ**<br>ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಮಿರ್ಜಾನ–ಕೋಡಕಣಿ, ಇವರು ದಿನಾಂಕ 31–05–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 17 | **ಶ್ರೀ ಜಿ.ಐ.ಭಟ್ಟ**<br>ವೃತ್ತಿಶಿಕ್ಷಕರು, ಜನತಾ ವಿದ್ಯಾಲಯ, ಅನಿಲಗೋಡ, ಇವರು ದಿನಾಂಕ 31–05–2014 ರಂದು ಸ್ವಯಂ ಸೇವಾ ನಿವೃತ್ತಿ ಹೊಂದಿರುವರು. |  |
| 18 | **ಶ್ರೀ ನಾರಾಯಣ ಬಿ.ಆಗೇರ**<br>ಅಟೆಂಡರ, ಜಿ.ಸಿ.ಕಾಲೇಜ್, ಅಂಕೋಲಾ ಇವರು ದಿನಾಂಕ 31–05–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 19 | **ಶ್ರೀ ರತ್ನಾಕರ ಎಸ್.ಶೆಟ್ಟಿ**<br>ಜವಾನರು, ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ದಾಂಡೇಲಿ ಇವರು ದಿನಾಂಕ 31–05–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 20 | **ಶ್ರೀ ಎಸ್.ಎನ್.ನಾಯಕ**<br>ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಬಾಡ–ಕಾಗಾಲ ಇವರು ದಿನಾಂಕ 30–06–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |

| | | |
|---|---|---|
| 21 | **ಶ್ರೀಮತಿ ಸಾವಿತ್ರಿ ಎನ್.ನಾಯಕ**<br>ಮುಖ್ಯ ಶಿಕ್ಷಕರು, ಜನತಾ ವಿದ್ಯಾಲಯ, ಶಿರಾಲಿ, ಇವರು ದಿನಾಂಕ 30–06–2014 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 22 | **ಶ್ರೀ ಫಕೀರೇಶ ಬಿ.ತಳವಾರ**<br>ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಬೇಡಕಣಿ ಇವರು ದಿನಾಂಕ 15–05–2014 ರಂದು ಆಕಸ್ಮಿಕ ನಿಧನ ಹೊಂದಿರುತ್ತಾರೆ ಎಂದು ತಿಳಿಸಲು ಅತೀವ ದು:ಖವೆನಿಸುತ್ತದೆ. ಅವರ ಅಕಾಲಿಕ ನಿಧನಕ್ಕೆ ಟ್ರಸ್ಟಿನ ಪರವಾಗಿ ಅವರ ಕುಟುಂಬಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ. |  |
| 23 | **ಶ್ರೀ ವಿ.ಜಿ.ಪಾಟೀಲ**<br>ಸಂಗೀತಶಿಕ್ಷಕರು, ದಿನಕರ ಕಲಾನಿಕೇತನ ಕಾರವಾರ ಮತ್ತು ಅಂಕೋಲಾದಲ್ಲಿ 23 ವರ್ಷಗಳಿಂದ ಸೇವೆ ಸಲ್ಲಿಸಿದ್ದಾರೆ. ಅವರು ದಿನಾಂಕ 21–02–2014 ರಂದು ದೈವಾದೀನರಾಗಿರುವರು |  |

ಟ್ರಸ್ಟಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿ, ಸೇವಾ ನಿವೃತ್ತಿ ಹೊಂದಿದ ಎಲ್ಲರ ಸೇವೆ ಸ್ಮರಿಸಿ, ಅವರ ನಿವೃತ್ತಿ ಜೀವನ ಶುಭದಾಯಕವಾಗಲಿ ಎಂದು ಟ್ರಸ್ಟಿನ ಹಾಗೂ ತಮ್ಮೆಲ್ಲರ ಪರವಾಗಿ ಹಾರೈಸುತ್ತೇನೆ.

ಮುಖ್ಯಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ

1) ಶ್ರೀಮತಿ ಉಷಾ ನಾಯಕ, ಜನತಾ ವಿದ್ಯಾಲಯ ಮಿರ್ಜಾನ–ಕೋಡಕಣಿ ಮತ್ತು
2) ಶ್ರೀ ಎಸ್.ಎನ್.ನಾಯಕ, ಜನತಾ ವಿದ್ಯಾಲಯ, ಬಾಡ–ಕಾಗಾಲ

ಇವರ ಸೇವಾ ನಿವೃತ್ತಿಯಿಂದ ತೆರವಾದ ಮುಖ್ಯಾಧ್ಯಾಪಕರ ಹುದ್ದೆಗಳನ್ನು ಹಾಗೂ

3) ಶ್ರೀ ಎಫ್.ಬಿ.ತಳವಾರ, ಜನತಾ ವಿದ್ಯಾಲಯ, ಬೇಡಕಣಿ

ಇವರು ಸೇವೆಯಲ್ಲಿರುವಾಗಲೇ ನಿಧನ ಹೊಂದಿರುವದರಿಂದ ಖಾಲಿಯಾಗಿರುವ ಮುಖ್ಯಾಧ್ಯಾಪಕರ ಹುದ್ದೆಯನ್ನು ಸರ್ಕಾರದ ನಿಯಮದಂತೆ ಭರ್ತಿ ಮಾಡಲು ಆಡಳಿತ ಮಂಡಳಿ ಕ್ರಮ ಜರುಗಿಸಿ ಪ್ರಸ್ತಾವನೆ ಇಲಾಖೆಗೆ ಸಲ್ಲಿಸಿರುತ್ತದೆ.

ಶ್ರೀ ಫಕೀರೇಶ ಬಿ.ತಳವಾರ, ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಬೇಡಕಣಿ ಹಾಗೂ ಶ್ರೀ ವಿ.ಜಿ.ಪಾಟೀಲ, ಸಂಗೀತ ಶಿಕ್ಷಕರು ದಿನಕರ ಕಲಾನಿಕೇತನ ಕಾರವಾರ ಮತ್ತು ಅಂಕೋಲಾ ಇವರ ಅಕಾಲಿಕ ನಿಧನಕ್ಕೆ ಎಲ್ಲರೂ ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಬೇಕೆಂದು ವಿನಂತಿಸುತ್ತೇನೆ.

## 21.ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ

ಟ್ರಸ್ಟಿನ ನಿರ್ದೇಶನದಂತೆ 2013–14ನೇ ಸಾಲಿನಲ್ಲಿಯೂ ಕೂಡಾ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡವು ಟ್ರಸ್ಟಿನ ವಿವಿಧ ಸಂಸ್ಥೆಗಳಿಗೆ ಭೆಟ್ಟಿ ನೀಡಿ ಎಲ್ಲ ಶಾಲೆಗಳ, ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ ನಡೆಸಿರುತ್ತದೆ. ಪದವಿ ಹಾಗೂ ಪದವಿ ಪೂರ್ವ ವಿಭಾಗದ ಲೆಕ್ಕ ಪತ್ರಗಳನ್ನು ಕೂಡಾ ಪರಿಶೀಲಿಸಲಾಗಿದೆ. ಪರಿಶೀಲನಾ ಸಂದರ್ಭದಲ್ಲಿ ಕಂಡುಬಂದ ಕೆಲವು ಅಂಶಗಳನ್ನು ಪ್ರತ್ಯೇಕ ವರದಿಯಲ್ಲಿ ನೀಡಲಾಗಿದೆ. ಶೈಕ್ಷಣಿಕ ಪರಿಶೀಲನಾ ವರದಿಯನ್ನು ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನೀಡಲಾಗಿದೆ.

ಈ ಪರಿಶೀಲನಾ ತಂಡದಲ್ಲಿ ವಿಷಯ ತಜ್ಞರಾಗಿ ಆಫೀಸ ಹಾಗೂ ಲೆಕ್ಕಪತ್ರ ಪರಿಶೀಲಕರಾಗಿ ಈ ಕೆಳಗಿನವರು ಭಾಗವಹಿಸಿದ್ದರು.

| | | |
|---|---|---|
| 1 | ಪ್ರೊ. ಜಿ.ವಿ.ಭಟ್ಟ | ಧರ್ಮದರ್ಶಿಗಳು, ಕೆನರಾ ವೆಲ್‌ಫೇರ್ ಟ್ರಸ್ಟ, ಅಂಕೋಲಾ |
| 2 | ಶ್ರೀ ವಿಷ್ಣು ನಾಯ್ಕ | ನಿವೃತ್ತ ಪ್ರಾಚಾರ್ಯರು, ಅಂಕೋಲಾ |
| 3 | ಪ್ರೊ. ಎಂ.ಎಸ್.ಹಬ್ಬು | ನಿವೃತ್ತ ಪ್ರಾಚಾರ್ಯರು, ಅಂಕೋಲಾ |
| 4 | ಪ್ರೊ. ವಿ.ಆರ್.ವೆರ್ಣೇಕರ | ನಿವೃತ್ತ ಪ್ರಾಚಾರ್ಯರು, ಅಂಕೋಲಾ |
| 5 | ಶ್ರೀ ರವೀಂದ್ರ ವಿ.ಕೇಣಿ | ಪ್ರಾಚಾರ್ಯರು, ಪಿ.ಎಂ.ಸಂ.ಪ.ಪೂ.ಕಾಲೇಜ,ಅಂಕೋಲಾ |
| 6 | ಶ್ರೀ ಎನ್.ಕೆ.ಭಟ್ಟ | ಉಪನ್ಯಾಸಕರು, ಜ.ವಿ.ಸಂ.ಪ.ಪೂ.ಕಾಲೇಜ, ದಾಂಡೇಲಿ |
| 7 | ಶ್ರೀ ವಿ.ಪಿ.ಶಾನಭಾಗ | ಶಿಕ್ಷಕರು, ಜನತಾ ವಿದ್ಯಾಲಯ, ಬಾಡ–ಕಾಗಲ |
| 8 | ಶ್ರೀ ಪಿ.ಪಿ.ಮಲ್ಯ | ಶಿಕ್ಷಕರು, ಪಿ.ಎ.ಹೈ ಸ್ಕೂಲ್, ಅಂಕೋಲಾ |
| 9 | ಶ್ರೀ ಎಸ್.ವಿ.ಮುಳಗುಂದ | ನಿವೃತ್ತ ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 10 | ಶ್ರೀ ಎನ್.ವಿ.ಹೆಗಡೆ | ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 11 | ಶ್ರೀ ಎಲ್.ವಿ.ಭಟ್ಟ | ಶಿಕ್ಷಕರು, ಜನತಾ ವಿದ್ಯಾಲಯ, ಕಾಸರಕೋಡ |
| 12 | ಶ್ರೀ ನೀಲಕಂಠ ಜಿ.ನಾಯ್ಕ | ಉಪನ್ಯಾಸಕರು, ಬಿ.ಎಡ್.ಕಾಲೇಜ, ದಾಂಡೇಲಿ |
| 13 | ಶ್ರೀಮತಿ ಪಿಲೋಮಿನಾ ರೋಡ್ರಿಗಿಸ್ | ಶಿಕ್ಷಕರು ಜನತಾ ವಿದ್ಯಾಲಯ, ಕಾಸರಕೋಡ |
| 14 | ಶ್ರೀಮತಿ ಪ್ರತಿಭಾ ಭಾಗ್ವತ | ಶಿಕ್ಷಕರು, ಜನತಾ ವಿದ್ಯಾಲಯ, ಧಾರೇಶ್ವರ |
| 15 | ಶ್ರೀ ಗಣೇಶ ಎಸ್.ಭಟ್ಟ | ಶಿಕ್ಷಕರು, ಜನತಾ ವಿದ್ಯಾಲಯ, ಕಾಸರಕೋಡ |
| 16 | ಶ್ರೀ ಕೃಷ್ಣಾನಂದ ವಿ.ಶೆಟ್ಟಿ | ಆಡಳಿತಾಧಿಕಾರಿ, ಕೆನರಾ ವೆಲ್‌ಫೇರ್ ಟ್ರಸ್ಟ, ಅಂಕೋಲಾ |
| 17 | ಶ್ರೀ ಪ್ರಶಾಂತ ಎನ್.ರಾವ್ | ಸ್ಪೇಷಲ್ ಕೋ–ಆರ್ಡಿನೇಟರ, ಕೆನರಾ ವೆಲ್‌ಫೇರ್ ಟ್ರಸ್ಟ |
| 18 | ಶ್ರೀ ರಾಜು ಜಿ.ನಾಯ್ಕ | ಆಫೀಸ ಸಹಾಯಕರು, ಕೆನರಾ ವೆಲ್‌ಫೇರ್ ಟ್ರಸ್ಟ |



ಇವರೆಲ್ಲರ ಸಹಕಾರದಿಂದ ಟ್ರಸ್ಟಿನ ಎಲ್ಲ ಶಾಲೆಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು. ಪ್ರತಿಯೊಂದು ಶಾಲೆಯ ಶೈಕ್ಷಣಿಕ ಪ್ರಗತಿ ಪರಿಶೀಲಿಸಿ, ಅಲ್ಲಿಯ ಕುಂದುಕೊರತೆಗಳನ್ನು ಶಿಕ್ಷಕರ ಸಮಕ್ಷಮ ಚರ್ಚಿಸಲಾಯಿತು. ಬಹುತೇಕ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ವಾತಾವರಣ ಚೆನ್ನಾಗಿರುವದಾಗಿ ಪರಿಶೀಲನಾ ಸಮಿತಿ ಅಭಿಪ್ರಾಯ ಪಟ್ಟಿದೆ. ಶೈಕ್ಷಣಿಕ ವಾತಾವರಣ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಶೆಯಲ್ಲಿ ಅನೇಕ ಸಲಹೆ ಸೂಚನೆಗಳನ್ನು ವರದಿಯಲ್ಲಿ ನೀಡಲಾಗಿದೆ. 2013–2014ನೇ ಸಾಲಿನ ಪರಿಶೀಲನಾ ವರದಿಯನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಗೆ ನೀಡಲಾಗಿದೆ.

## 22. ಪ್ರಗತಿ ಪರಿಶೀಲನಾ ತಂಡದ ಸಲಹೆಗಳು

- "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವದು.
- ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವದು.
- ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಯತ್ನಿಸುವದು.
- ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವದು.
- ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರೀಯಾಶೀಲತೆಯನ್ನು ಹೆಚ್ಚಿಸಿಕೊಂಡು, ಸಮಾಜದಲ್ಲಿ ಗೌರವ ಸಂಪಾದಿಸಿಕೊಂಡು, ಶಾಲೆಗೂ ಟ್ರಸ್ಟಿಗೂ ಕೀರ್ತಿ ಬರುವಂತೆ ಕಾರ್ಯ ನಿರ್ವಹಿಸುವದು.

## 23. ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ

2013–2014ನೇ ಸಾಲಿನ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಕಾಲೇಜ್, ಜ್ಯೂನಿಯರ್ ಕಾಲೇಜ್ ಹಾಗೂ ಹೈಸ್ಕೂಲಿನ ಆಫೀಸ ಕಾರ್ಯನಿರ್ವಹಣೆ ಹಾಗೂ ಲೆಕ್ಕ ಪತ್ರದ ಪರಿಶೀಲನೆಯನ್ನು ಕೈಗೊಳ್ಳಲಾಗಿದೆ. ಈ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಈ ಕೆಳಗೆ ನೀಡಲಾಗಿದೆ.

1. ಹೈಸ್ಕೂಲಗಳಲ್ಲಿ, ಪದವಿ ಪೂರ್ವ ಕಾಲೇಜುಗಳಲ್ಲಿ ಹಾಗೂ ಪದವಿ ಕಾಲೇಜುಗಳಲ್ಲಿ ಮುಖ್ಯವಾಗಿ ಈ ಕೆಳಗೆ ನಮೂದಿಸಿದ 3 ಲೆಕ್ಕವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ.
   - Govt. A/c Book
   - Non-Govt. A/c Book
   - Management A/c Book
   - ಲೆಕ್ಕಪತ್ರ ನಿರ್ವಹಣೆಯ ಸಿಬ್ಬಂದಿಯು ಪ್ರತಿಯೊಂದು ಲೆಕ್ಕದ ವ್ಯವಹಾರವನ್ನು ಆಯಾ ದಿವಸವೇ ಬರೆದು ಅಂತಿಮ ಶಿಲ್ಕು ದಾಖಲಿಸಿದ ನಂತರ ಸಂಸ್ಥೆಯ ಮುಖ್ಯಸ್ಥರು ಅದನ್ನು ಪರಿಶೀಲಿಸಿ ಸಹಿ ಮಾಡುವದು ಕಡ್ಡಾಯ
   - ಪ್ರತಿ ತಿಂಗಳು ತಪ್ಪದೆ ಪ್ರತಿಯೊಂದು ಲೆಕ್ಕದ ಜಮಾ–ಖರ್ಚು ಪತ್ರಿಕೆ ತಯಾರಿಸಬೇಕು ಹಾಗೂ ಆಡಳಿತ ಮಂಡಳಿಯ ಲೆಕ್ಕದ ಖಾತೆಯ ಜಮಾ–ಖರ್ಚಿನ ಪತ್ರಿಕೆಯ ಪ್ರತಿಯನ್ನು ಟ್ರಸ್ಟಿಗೆ ನಿಯಮಿತವಾಗಿ ಸಲ್ಲಿಸಬೇಕು.
   - ಶಾಲಾ/ಕಾಲೇಜುಗಳ ಲೆಕ್ಕಪತ್ರ ನಿರ್ವಹಣೆ ಸರಿಯಾಗಿ ನಿರ್ವಹಿಸುವಂತೆ ಸಂಸ್ಥೆಯ ಎಲ್ಲ ಮುಖ್ಯಸ್ಥರೊಂದಿಗೆ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರೊಡನೆ ಚರ್ಚಿಸಿ ಸಲಹೆ ಸೂಚನೆ ನೀಡಲಾಗಿದೆ.
2. ಲೈಬ್ರರಿ ಪುಸ್ತಕದ ಸ್ಟಾಕ್ ರಜಿಸ್ಟರ್‌ನ್ನು ಸರಿಯಾಗಿ ನಿರ್ವಹಿಸಿ ಪ್ರತಿ ವರ್ಷದ ಕೊನೆಯಲ್ಲಿ ಪುಸ್ತಕಗಳ ಪರಿಶೀಲನೆ ನಡೆಸಿ ಕಳೆದುಹೋದ ಇಲ್ಲವೇ ಹಾಳಾದ ಪುಸ್ತಕಗಳ ಪಟ್ಟಿ ಮಾಡಿ ಅದನ್ನು ಸಂಬಂಧಿಸಿದ ಇಲಾಖೆಯಿಂದ / ಆಡಳಿತ ಮಂಡಳಿಯಿಂದ ಮಂಜೂರಿ ಪಡೆದು ಸ್ಟಾಕಿನಲ್ಲಿ ಅಷ್ಟು ಪುಸ್ತಕವನ್ನು ಕಡಿಮೆ ಮಾಡಬೇಕು. ಇದನ್ನು ಕೆಲವು ಕಡೆ ನಿರ್ವಹಿಸಿದ್ದಾರೆ. ಇನ್ನೂ ಕೆಲವು ಸಂಸ್ಥೆಗಳು ಸರಿಯಾಗಿ ನಿರ್ವಹಿಸಿದ್ದು ಕಂಡುಬರಲಿಲ್ಲ. ಈ ಬಗ್ಗೆ ಹಿಂದಿನ ವರ್ಷದ ವರದಿಯಲ್ಲಿ ತಿಳಿಸಲಾಗಿತ್ತು. ಪುಸ್ತಕದ ಸ್ಟಾಕ್ ರಜಿಸ್ಟರನ್ನು ಹಾಗೂ ಇನ್ನಿತರ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು.
3. ಶಾಲೆ / ಕಾಲೇಜಿನ ಹೆಸರಿಗೆ ಮಂಜೂರಾದ ಜಾಗೆಯ ರಿಕಾರ್ಡನ್ನು ಪ್ರತಿ ವರ್ಷ ಸಂಬಂಧಿಸಿದ ತಹಶೀಲದಾರರಿಂದ ಪಡೆಯಬೇಕು. ಲೀಜ್ ಮೇಲೆ ಮಂಜೂರಾದ ಜಾಗೆಯ ಕುರಿತು, ಲೀಜ್ ಅವಧಿ ಮುಗಿಯುವ ಸಾಕಷ್ಟು ಪೂರ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಲೀಜ್ ಅವಧಿಯನ್ನು ವಿಸ್ತರಿಸಿಕೊಳ್ಳಬೇಕು ಹಾಗೂ ಆ ಬಗ್ಗೆ ಟ್ರಸ್ಟಿಗೆ ಕಾಲಕಾಲಕ್ಕೆ ಮಾಹಿತಿ ಸಲ್ಲಿಸಬೇಕು. ಪ್ರತಿ ವರ್ಷ ಶೈಕ್ಷಣಿಕ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಸಂಸ್ಥೆಯ

ಜಾಗದ ಹೊಸ ರಿಕಾರ್ಡ ನೀಡಬೇಕು. ಈ ವರ್ಷ ಎಲ್ಲ ಸಂಸ್ಥೆಯ ಮುಖ್ಯಸ್ಥರು ಸಕಾಲದಲ್ಲಿ ಮಾಹಿತಿಯನ್ನು ಪೂರೈಸಿರುವರು.

4. Kruger Foundation ನಿಂದ ಮಂಜೂರಾದ ಹಣವನ್ನು ಟ್ರಸ್ಟಿನ ವಿವಿಧ ಮಾಧ್ಯಮಿಕ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1000/– ರಂತೆ ನೀಡಲು ಸಂಸ್ಥೆಯ ಅಧ್ಯಕ್ಷರು ತಿಳಿಸಿದಂತೆ ಸಂಸ್ಥೆಗೆ ಹಣ ನೀಡಲಾಗಿದೆ. ಟ್ರಸ್ಟಿನ ವಿವಿಧ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಶಿಕ್ಷಕರು ತಮ್ಮ ಬಿಡುವಿನ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರ ಶಿಕ್ಷಣ ಮಟ್ಟ ಸುಧಾರಿಸುವಂತೆ ವಿಶೇಷ ಪ್ರಯತ್ನ ಮಾಡಬೇಕು. ಈ ಕುರಿತು ದಾಖಲೆಯನ್ನು ಇಡಬೇಕು. ಶಾಲೆಯ ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿ ಅಭ್ಯಾಸದಲ್ಲಿ ಹಿಂದುಳಿದ ಮಕ್ಕಳಿಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರು ವಿಶೇಷ ತರಬೇತಿ ಸರಿಯಾಗಿ ನೀಡುತ್ತಿರುವದನ್ನು ಪರಿಶೀಲಿಸಿ ಧೃಢೀಕರಿಸಿಕೊಳ್ಳಬೇಕು. ಈ ಕೆಲಸ ಸರಿಯಾಗಿ ನಿರ್ವಹಿಸುವವರಿಗೆ ಮಾತ್ರ ಈ ಸಹಾಯಧನ ನೀಡಬೇಕು.

5. ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಪ್ರಗತಿಗೆ ಸಹಾಯಕಾರಿಯಾಗಿದೆ ಎಂಬುದು ಪರಿಶೀಲನಾ ಸಮಿತಿಯ ಅಭಿಪ್ರಾಯವಾಗಿದೆ. ಈ ಯೋಜನೆಯನ್ನು ಈ ವರ್ಷವೂ ಮುಂದುವರೆಸಿದ ಬಗ್ಗೆ Kruger Foundation ಸಂಸ್ಥೆಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದವನ್ನು ಸಲ್ಲಿಸುತ್ತೇವೆ. ಈ ಯೋಜನೆಯ ಲಾಭ ಎಲ್ಲ ಅರ್ಹ ಮಕ್ಕಳಿಗೆ ಲಭಿಸುವಲ್ಲಿ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ನೀಡುವ ಅವಶ್ಯಕತೆ ಇದೆ.

6. ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ಅವರು ಪಡೆದ ರಜೆಯ ವಿವರಗಳನ್ನು ಸರಿಯಾಗಿ ನಮೂದಿಸಬೇಕು. ವಾರ್ಷಿಕ ಮುಂಭಡ್ತಿ ಹಾಗು ಇನ್ನಿತರ ಸೇವಾ ಭಡ್ತಿಗಳನ್ನು ಕಾಲಕಾಲಕ್ಕೆ ಸರಿಯಾಗಿ ಸೇವಾ ಪುಸ್ತಕದಲ್ಲಿ ನಮೂದಿಸಿ, ಸಂಸ್ಥೆಯ ಮುಖ್ಯಸ್ಥರು ದೃಢೀಕರಿಸಬೇಕು.

7. ಶಾಲಾ / ಕಾಲೇಜಿನ ಮುಖ್ಯಸ್ಥರು ರಜೆಯ ಮೇಲೆ ಹೋಗುವ ಪೂರ್ವದಲ್ಲಿ ತಮ್ಮ ರಜೆಯ ಅರ್ಜಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಾಕಷ್ಟು ಮುಂಚಿತವಾಗಿ ಕಳುಹಿಸಬೇಕು. ಹಾಗೂ ತಮ್ಮ ಸಂಸ್ಥೆಯ ಹಿರಿಯ ಸಹೋದ್ಯೋಗಿಯವರಿಗೆ ತಮ್ಮ ರಜಾ ಅವಧಿಯಲ್ಲಿ In-charge ಆಗಿ ಕಾರ್ಯನಿರ್ವಹಿಸುವಂತೆ ಲಿಖಿತವಾಗಿ ತಿಳಿಸಬೇಕು. ವಾರ್ಷಿಕ ತಪಾಸಣಾ ಸಂದರ್ಭದಲ್ಲಿ ಕೆಲವು ಸಂಸ್ಥೆಗಳು ಇದನ್ನು ಪಾಲಿಸದೇ ಇರುವದು ಗಮನಕ್ಕೆ ಬಂದಿರುತ್ತದೆ. ಅವರಿಗೆ ಈ ಹಿಂದೆಯೂ ಕೂಡಾ ಸೂಚನೆ ನೀಡಲಾಗಿತ್ತು. ಈ ಕುರಿತು ಸುತ್ತೋಲೆಯನ್ನು ಕೂಡಾ ಹೊರಡಿಸಲಾಗಿದೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ರಜೆಯ ಅರ್ಜಿಯನ್ನು ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳದೆ ಇರುವದು ತಮ್ಮ ರಜಾ ಅವಧಿಯಲ್ಲಿ In-charge ವ್ಯವಸ್ಥೆ ಮಾಡದೆ ಇರುವದು ಕಂಡುಬಂದಿದೆ. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ರಜೆ ಅರ್ಜಿಯನ್ನು ಟ್ರಸ್ಟಿಗೆ ಸಲ್ಲಿಸಿ ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳುವಂತೆ ಇನ್ನೊಮ್ಮೆ ತಿಳಿಸಲಾಗಿದೆ. ಇದನ್ನು ಪಾಲಿಸದಿದ್ದರೆ ಆಡಳಿತಾತ್ಮಕವಾದ ತೊಂದರೆ ಉಂಟಾಗುತ್ತದೆ.

## 24. ಸಾಮಾನ್ಯ ಸೂಚನೆಗಳು

1. ಶಾಲಾ ಅಭಿವೃದ್ಧಿ ಕೆಲಸ ನಿರ್ವಹಿಸುವಾಗ ಇಲ್ಲವೆ ಲೈಬ್ರರಿ / ಲೆಬೋರೆಟರಿ / ಸ್ಪೋರ್ಟ್ಸ್ / ಪುಸ್ತಕ / ಸಲಕರಣೆ ಇತ್ಯಾದಿ ಖರೀದಿಸುವ ಸಂದರ್ಭದಲ್ಲಿ ಪ್ರತಿವರ್ಷ ಶೈಕ್ಷಣಿಕ ವರ್ಷ ಪ್ರಾರಂಭವಾದ ಕೂಡಲೆ ಈ ಕೆಳಗೆ ನಮೂದಿಸಿದವರ ಒಂದು ಉಪಸಮಿತಿ ನೇಮಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಕಾಲಕಾಲಕ್ಕೆ ಈ ಸಮಿತಿಯು ಅಭಿವೃದ್ಧಿ ಕಾರ್ಯದ ಜೊತೆಗೆ ಅದರ ಮೇಲ್ವಿಚಾರಣೆ ಕೂಡಾ ನಡೆಸುತ್ತಿರಬೇಕು ಈ ಉಪಸಮಿತಿಯಲ್ಲಿ –
   - ಸಂಸ್ಥೆಯ ಮುಖ್ಯಸ್ಥರು
   - ಹಿರಿಯ ಅಧ್ಯಾಪಕರು
   - ಸ್ಟಾಫ್ ಕೌನ್ಸಿಲ ಕಾರ್ಯದರ್ಶಿ ಹಾಗೂ
   - ಆಫೀಸನಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಸಿಬ್ಬಂದಿ ಇರಬೇಕು

   ಈ ಉಪಸಮಿತಿ ಕಾಲಕಾಲಕ್ಕೆ ಸಭೆ ಸೇರಿ ಅಭಿವೃದ್ಧಿ ಕೆಲಸದ ಬಗ್ಗೆ ಇಲ್ಲವೆ ಸಲಕರಣೆ ಖರೀದಿಸುವ ಕುರಿತು ನಿರ್ಣಯ ತೆಗೆದುಕೊಂಡು ಕಾರ್ಯ ನಿರ್ವಹಿಸಿದರೆ ಹಾಗೂ ಹಣ ಪಾವತಿಸುವಾಗಲೂ ಈ ಸಮಿತಿಯ ಒಪ್ಪಿಗೆ ಪಡೆದು ಹಣ ಪಾವತಿಸಿದರೆ ಸಂಸ್ಥೆಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಕಾಣಬಹುದು. ಈ ಕುರಿತು ಹಿಂದಿನ ವರ್ಷಗಳ ವರದಿಯಲ್ಲಿ ನಮೂದಿಸಲಾಗಿತ್ತು. ಆದರೆ ಕೆಲವು ಸಂಸ್ಥೆಗಳ ಮುಖ್ಯಸ್ಥರು ಈ ಬಗ್ಗೆ ಗಮನ ಹರಿಸಿದ ಹಾಗೆ ಕಂಡುಬರುವದಿಲ್ಲ ಹಾಗೂ ಇದನ್ನು ಕಾರ್ಯರೂಪಕ್ಕೆ ತಂದಿರುವದಿಲ್ಲ. ಶಾಲಾ/ಕಾಲೇಜಿನ ಲೆಕ್ಕಪತ್ರದಲ್ಲಿ ಲೆಕ್ಕಪತ್ರ ಸರಿಯಾಗಿ ನಿರ್ವಹಣೆಯಾಗಬೇಕಾದರೆ ಈ ನಿಯಮವನ್ನು ಪಾಲಿಸುವದು ಅವಶ್ಯ.
2. ಟ್ರಸ್ಟಿನ ಶಾಲಾ/ಕಾಲೇಜುಗಳ ಮುಖ್ಯಸ್ಥರು ಅನಿವಾರ್ಯ ಪ್ರಸಂಗದಲ್ಲಿ ಶಾಲಾ/ಕಾಲೇಜಿಗೆ ಸಂಬಂಧಪಟ್ಟ ಯಾವದಾದರೂ ಉದ್ದೇಶಕ್ಕಾಗಿ ಮುಂಗಡ ಹಣ ಪಡೆದಿದ್ದರೆ, ಅದರ ಲೆಕ್ಕವನ್ನು ಒಂದು ವಾರದ ಒಳಗೆ ಮುಕ್ತಾಯಗೊಳಿಸಬೇಕೆಂದು ಈ ಹಿಂದೆಯೇ ಅನೇಕ ಬಾರಿ ತಿಳಿಸಲಾಗಿದೆ. ಇದನ್ನು ಕಟ್ಟು ನಿಟ್ಟಾಗಿ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕು.
3. ಶಾಲಾ/ಕಾಲೇಜು ವತಿಯಿಂದ ಪಾವತಿಸಿದ ಹಣಕ್ಕೆ ರಸೀದಿ ಮತ್ತು ಬಿಲ್ಲು / ವಿವರಣೆ ಪತ್ರ ಸರಿಯಾಗಿ ಇಟ್ಟಿದ್ದು ಕೆಲವು ಸಂಸ್ಥೆಗಳಲ್ಲಿ ಕಂಡು ಬಂದಿರುವದಿಲ್ಲ. ಪ್ರತಿಯೊಂದು ಬಿಲ್ಲಿನ ಹಣವನ್ನು ನಿಯಮದ ಪ್ರಕಾರ ಪಾವತಿಸಿ ಸರಿಯಾದ ಓಚರನ್ನು ಇಡಬೇಕು ಪ್ರತಿಯೊಂದು ಬಿಲ್ಲು ಪಾವತಿಸಿದ ಕೂಡಲೆ ಅದರ ಮೇಲೆ Head of Account ಕಡ್ಡಾಯವಾಗಿ ನಮೂದಿಸಬೇಕು. ಇದನ್ನು ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ಲೆಕ್ಕಪತ್ರದ ನಿರ್ವಹಣೆ ಪುಸ್ತಕದ ಮೇಲೆ ಸಹಿ ಮಾಡಬೇಕು.
4. ಕೆನರಾ ವೆಲ್‌ಫೇರ್ ಟ್ರಸ್ಟಿಗೆ ನೀಡುವ ದೇಣಿಗೆಗೆ ಸೆಕ್ಷನ 80G ಪ್ರಕಾರ ಆದಾಯಕರ ವಿನಾಯ್ತಿಯನ್ನು, ಆದಾಯಕರ ಇಲಾಖೆಯವರು ದಿನಾಂಕ 03–06–2011 ರಂದು ಆದೇಶ ಹೊರಡಿಸಿ ಸೆಕ್ಷನ 80G ಪ್ರಕಾರ ದೇಣಿಗೆ ಹಣಕ್ಕೆ ನೀಡುವ ವಿನಾಯ್ತಿಯನ್ನು ಮುಂದುವರೆಸಿದ್ದಾರೆ. ಸಂಸ್ಥೆಯ ಮುಖ್ಯಸ್ಥರು ಇದನ್ನು ಗಮನಿಸಬೇಕು.

## 25. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ

ಸಾಮಾನ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಪಠ್ಯಪುಸ್ತಕದಲ್ಲಿರುವ ಪಾಠಗಳನ್ನು ಅಧ್ಯಾಪಕರು ಮುಗಿಸಿದರೆ ವರ್ಷದ ಕರ್ತವ್ಯ ಮುಗಿದಂತೆ ಹಾಗೂ ಪರೀಕ್ಷೆಯ ಪರಿಣಾಮವೇ ಶಿಕ್ಷಣ ಸಂಸ್ಥೆಯ ತರಗತಿಯ ಅಳತೆಗೋಲು ಎಂಬ ಕಲ್ಪನೆಯಿದೆ. ಪಠ್ಯಪುಸ್ತಕದ ಆಚೆಯೂ ಇರುವ ಹೊರಗಿನ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ರಾಜಕೀಯ ಚಿಂತನೆ (ಅಣಕು ಸಂಸತ್ತಿನ ಮೂಲಕ) ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳು ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವಂಥ ಬಹುಮುಖ ವ್ಯಕ್ತಿತ್ವ ವಿಕಸನ ಶಿಕ್ಷಣ ಪದ್ದತಿಗೆ ಬೋಧಕ ಸಿಬ್ಬಂದಿಗಳು ವಿಶೇಷ ಗಮನ ನೀಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ಕ್ರುಗರ್ ಫೌಂಡೇಶನ್ ನೀಡಿದ ಹೆಚ್ಚುವರಿ ಆರ್ಥಿಕ ಸೌಲಭ್ಯ ಪಡೆಯುತ್ತಿರುವ ತಾತ್ಕಾಲಿಕ ಶಿಕ್ಷಕರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ಆದ್ಯತೆ ಮೇರೆಗೆ ವಿಶೇಷ ಗಮನ ನೀಡಲು ಸೂಚಿಸಿದೆ. ಆಯಾ ಶಾಲೆಯ ಮುಖ್ಯಸ್ಥರು ಈ ಕುರಿತು ಹೆಚ್ಚು ಗಮನ ಹರಿಸಿ ಕ್ರುಗರ ಫೌಂಡೇಶನ್ ನೀಡುತ್ತಿರುವ ಸಹಾಯ ಧನದ ಹಿಂದೆ ಇರುವ ಸಾಮಾಜಿಕ ಕಳಕಳಿ ಸಾರ್ಥಕಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಕೆನರಾ ವೆಲ್‌ಫೆರ್ ಟ್ರಸ್ಟು ಎಲ್ಲ ಸಂಸ್ಥೆಗಳ ಶೈಕ್ಷಣಿಕ ಪರಿಶೀಲನೆ ಹಾಗೂ ಲೆಕ್ಕಪತ್ರ ಪರಿಶೀಲನೆ ನಡೆಸುವಂತ ಈ ಒಂದು ಹೊಸ ಯೋಜನೆಯನ್ನು ಕಳೆದ ಕೆಲವು ವರ್ಷಗಳಿಂದ ನಡೆಸುತ್ತ ಬಂದಿದೆ. ಇದರಿಂದ ಶಾಲೆಯ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಅನುಕೂಲವಾಗುವದರ ಜೊತೆಗೆ ಶಾಲೆಯ ಆಡಳಿತ, ಲೆಕ್ಕಪತ್ರ ನಿರ್ವಹಣೆಗೆ ಹಾಗೂ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸ್ಥಳದಲ್ಲೆ ಪರಿಹಾರ ದೊರೆಯುವದರಿಂದ ಶಾಲೆಯ ಮುಖ್ಯಾಧ್ಯಾಪಕರಿಗೆ / ಪ್ರಾಚಾರ್ಯರಿಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲು ಹಾಗೂ ಶಾಲೆಯ ಸರ್ವತೋಮುಖ ಅಭಿವೃದ್ದಿಗೆ ಶ್ರಮಿಸಲು ಸಹಕಾರಿಯಾಗುತ್ತದೆ ಎಂಬುದು ಪರಿಶೀಲನಾ ತಂಡದ ಅನಿಸಿಕೆ. ಸಂಸ್ಥೆಯ ಮುಖ್ಯಸ್ಥರು ವರದಿಯಲ್ಲಿ ನಮೂದಿಸಿದ ನ್ಯೂನತೆಗಳಿಗೆ ಹೆಚ್ಚು ಒತ್ತು ನೀಡಿ ಕಾರ್ಯ ನಿರ್ವಹಿಸಿದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಗತಿ ತೋರಿಸಲು ಸಾಧ್ಯವಿದೆ.

- ಮಾನ್ಯ ಟ್ರಸ್ಟಿಗಳಾದ **ಪ್ರೊ. ಜಿ.ವಿ.ಭಟ್ಟ**ರವರು ಟ್ರಸ್ಟು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡದ ಜೊತೆಗೆ ಭಾಗವಹಿಸಿ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಪಾಲುಗೊಂಡು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ, ಅವರಿಗೆ ಧನ್ಯಾವಾದಗಳು.
- 2013–2014ನೇ ಸಾಲಿನ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಎಲ್ಲ ವಿಷಯ ತಜ್ಞರು ಸಂಪೂರ್ಣ ಸಹಕಾರ ನೀಡಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಪ್ರತಿಯೊಂದು

ಶಾಲೆಯ ಶೈಕ್ಷಣಿಕ ಕಾರ್ಯವನ್ನು ವೀಕ್ಷಿಸಿ ಕೊನೆಯಲ್ಲಿ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಅಧ್ಯಾಪಕರಲ್ಲಿ ಹಾಗೂ ಪರಿಶೀಲನಾ ತಂಡದಲ್ಲಿ ವ್ಯಕ್ತಪಡಿಸಿ, ಮುಂಬರುವ ದಿನಗಳಲ್ಲಿ ಶಾಲೆಗಳ ಪ್ರಗತಿಗಾಗಿ ಹಾಕಿಕೊಳ್ಳಬೇಕಾದ ಕಾರ್ಯಯೋಜನೆ ಕುರಿತು ತಿಳುವಳಿಕೆ ನೀಡಿರುತ್ತಾರೆ. ಈ ಒಂದು ಮಹತ್ವದ ಕಾರ್ಯದಲ್ಲಿ ಪಾಲುಗೊಂಡು ತಮ್ಮ ಅಮೂಲ್ಯವಾದ ವೇಳೆಯನ್ನು ಈ ಕಾರ್ಯಕ್ಕೆ ನೀಡಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಬರುವ ವರ್ಷಗಳಲ್ಲಿ ಕೂಡ ಅವರಿಂದ ಇದೇ ರೀತಿಯ ಸಹಕಾರ ನಿರೀಕ್ಷಿಸಲಾಗಿದೆ.

ಪ್ರಗತಿ ಪರಿಶೀಲನೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಶಾಲೆಗಳ/ ಕಾಲೇಜುಗಳ ಮುಖ್ಯಾಧ್ಯಾಪಕರು / ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದದವರು, ಅಧ್ಯಾಪಕೇತರರು ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪರಿಶೀಲನಾ ಕಾರ್ಯ ನೆರವೇರಿಸಲು ಪ್ರೇರಣೆ ನೀಡಿದ ಟ್ರಸ್ಟಿನ ಅಧ್ಯಕ್ಷರು ಮತ್ತು ಎಲ್ಲ ಧರ್ಮದರ್ಶಿಗಳಿಗೆ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

ಪ್ರಗತಿ ಪರಿಶೀಲನಾ ಹಾಗೂ ಲೆಕ್ಕ ಪತ್ರ ತಪಾಸಣಾ ವರದಿಯನ್ನು ಸಂಸ್ಥೆಯ ಎಲ್ಲ ಮುಖ್ಯಸ್ಥರಿಗೆ ನೀಡಲಾಗಿದೆ. ಈ ಹಿಂದಿನ ಪರಿಶೀಲನಾ ಸಮಿತಿಯ ವರದಿಯಲ್ಲಿ ಸೂಚಿಸಿದ ಸಲಹೆಗಳನ್ನು ಕೆಲವು ಸಂಸ್ಥೆಯ ಮುಖ್ಯಸ್ಥರು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬರುವದಿಲ್ಲ. ಆದ್ದರಿಂದ ಸಂಸ್ಥೆಯ ಎಲ್ಲ ಮುಖ್ಯಸ್ಥರು ಪರಿಶೀಲನಾ ವರದಿಯಲ್ಲಿ ನಮೂದಿಸಿದ ಎಲ್ಲ ಅಂಶಗಳಿಗೆ ಗಮನ ನೀಡಿ ಮುಂಬರುವ ದಿನಗಳಲ್ಲಿ ಎಲ್ಲ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೆಚ್ಚಿನ ಪ್ರಗತಿ ಸಾಧಿಸಲು ಈ ಮೂಲಕ ವಿನಂತಿಸಲಾಗಿದೆ.

2013–2014ನೇ ಶೈಕ್ಷಣಿಕ ವರ್ಷದ ಎಲ್ಲ ಶಾಲೆ, ಕಾಲೇಜುಗಳ ಹಾಗೂ ಕೆನರಾ ವೆಲ್‌ಫೆರ್ ಟ್ರಸ್ಟಿನ ಲೆಕ್ಕಪತ್ರವನ್ನು ಲೆಕ್ಕಪರಿಶೋಧಕರಾದ ಶ್ರೀ ಯು.ಕೆ.ಅಣ್ವೇಕರ ಹಾಗೂ ಅವರ ಸಿಬ್ಬಂದಿ ವರ್ಗ ಸಕಾಲದಲ್ಲಿ ಮುಗಿಸಿ ಕೊಟ್ಟಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಟ್ರಸ್ಟಿನ ದೈನಂದಿನ ವ್ಯವಹಾರದಲ್ಲಿ, ಅಭಿವೃದ್ಧಿ ಕೆಲಸದಲ್ಲಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ, ಟ್ರಸ್ಟಿನ ಆಡಳಿತ ನಿರ್ವಹಣೆಯಲ್ಲಿ ಸದಾ ಮಾರ್ಗದರ್ಶನ ನೀಡುತ್ತಿರುವ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ **ಶ್ರೀ ಎಸ್.ಪಿ.ಕಾಮತ**ರವರಿಗೆ, ಟ್ರಸ್ಟಿಗಳಾದ **ಪ್ರೊ. ಜಿ.ವಿ.ಭಟ್ಟ**ರವರಿಗೆ ಹಾಗೂ **ಶ್ರೀಮತಿ ಉಷಾ ಪ್ರಧಾನ** ಅವರಿಗೆ ಈ ಸಂದರ್ಭದಲ್ಲಿ ನೆನೆದು ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಾವೆಲ್ಲರೂ ಮುಕ್ತ ಮನಸ್ಸಿನಿಂದ ಮುಂದೆ ನಡೆಯುವ ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆ ಸೂಚನೆ ನೀಡಿ ಸಭೆಯಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಟ್ರಸ್ಟಿನ ಅಧ್ಯಕ್ಷರಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇನೆ. ಈ ಒಂದು ಮಹತ್ವಪೂರ್ಣವಾದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ತಮಗೆಲ್ಲರಿಗೆ ಇನ್ನೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ವರದಿಯನ್ನು ಮುಗಿಸುತ್ತೇನೆ.

**ಜೈ ಹಿಂದ!**

**ಅಂಕೋಲಾ**
**19 ಜುಲೈ 2014**

**ಕೃಷ್ಣಾನಂದ ವಿ.ಶೆಟ್ಟಿ**
**ಆಡಳಿತಾಧಿಕಾರಿ**
**ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ**

# INSTITUTIONS RUN BY KANARA WELFARE TRUST

| Sl.No. | Name of the Institution | Place | Estd. | Head of the Institution |
|---|---|---|---|---|
| | **DEGREE COLLEGES** | | | |
| 1 | Gokhale Centenary College | Ankola | 1966 | Shri V.R.Kamat |
| 2 | Divekar College Of Commerce | Karwar | 1970 | Dr. M.H.Naik |
| 3 | KWT's College of Education | Dandeli | 2005 | Smt. Jayashree V.Korati |
| 4 | KWT's B.C.A. College | Karwar | 2008 | Dr. M.H.Naik |
| | **JUNIOR COLLEGES** | | | |
| 5 | Gokhale Centenary Pre-University College | Ankola | 2001 | Shri V.R.Kamat |
| 6 | Divekar Pre-University Commerce College | Karwar | 2001 | Dr. M.H.Naik |
| 7 | Janata Vidyalaya Composite Junior College | Dandeli | 1971 | Shri M.S.Lamani |
| 8 | Janata Vidyalaya Composite Junior College | Kadtoka, Honnavar | 1971 | Shri Bhimraj R. |
| 9 | Janata Vidyalaya Composite Junior College | Shirali, Bhatkal | 1982 | Shri A.B.Ramrath |
| 10 | P.M. Composite Junior College | Ankola | 1993 | Shri Phalgun C.Gouda |
| 11 | Divekar Pre-University Science College | Karwar | 2004 | Dr. M.H.Naik |
| | **HIGH SCHOOLS** | | | |
| 12 | People's Multipurpose High School | Ankola | 1953 | Shri R.V.Keni |
| 13 | Janata Vidyalaya | Baad-Kagal, Kumta | 1954 | Shri V.P.Shanbhag (I/c) |
| 14 | Janata Vidyalaya | Shirali, Bhatkal | 1955 | Shri M.A.Naik (I/c) |
| 15 | Janata Vidyalaya | Dandeli | 1956 | Smt. Haleema Bhukhari |
| 16 | Janata Vidyalaya | Kadwad, Karwar | 1960 | Shri S.G.Sheregar |
| 17 | Janata Vidyalaya | Kasarkod, Honnavar | 1960 | Smt. Nagaratna H Nayak |
| 18 | Janata Vidyalaya | Murdeshwar, Bhatkal | 1960 | Shri Sandesh Ullikashi |
| 19 | Janata Vidyalaya | Mirjan-Kodkani, Kumta | 1961 | Shri S.K.Naik (I/c) |
| 20 | Janata Vidyalaya | Kadtoka, Honnavar | 1962 | Smt. Usha G.Bhat |
| 21 | Janata Vidyalaya | Mudga, Karwar | 1963 | Shri A.R.Kondli |
| 22 | Janata Vidyalaya | Dhareshwar, Kumta | 1964 | Smt. Laxmi Kasmadi |
| 23 | Janata Vidyalaya | Bedkani, Siddapur | 1965 | Shri B.Laxman (I/c) |
| 24 | Smt. Kamalabai Pikale High School | Katgal, Kumta | 1966 | Shri I.V.Hebbar |
| 25 | Janata Vidyalaya | Anilgod, Honnavar | 1966 | Shri K.G.Hulswar |
| 26 | Janata Vidyalaya | Kulve-Baroor, Sirsi | 1968 | Shri T.D.Lamani |
| 27 | People's Multipurpose High School (English Medium) | Ankola | 2011 | Smt. Archana Naik |
| | **PRIMARY AND PRE-PRIMARY SCHOOLS** | | | |
| 28 | English Medium Primary School | Dandeli | 1958 | Smt. Anusuya C.Revankar |
| 29 | Kannada Medium Primary School | Dandeli | 1999 | Smt. Nandini Naik |
| 30 | Dr. Dinkar Desai Memorial Primary School | Ankola | 2004 | Shri Subhash K Naik |
| 31 | Dinkar Primary School | Dhareshwar, Kumta | 2006 | Shri J.R.Gunaga |
| 32 | Shrimat Sadyojat Shankarashram Swamiji Balamandir | Shirali, Bhatkal | 2008 | Shri A.B.Ramrath |
| 33 | English Medium Nursery School | Dandeli | 1958 | Smt. Anusuya C.Revankar |
| 34 | Kannada Medium Nursery School | Dandeli | 1999 | Smt. Anusuya C.Revankar |
| 35 | Thakkar Bapa Nursery School | Ankola | 2003 | Smt. Suneeta Argekar |
| 36 | Janata Vidyalaya Dinkar Pre-Primary School | Dhareshwar, Kumta | 2005 | Shri J.R.Gunaga |
| 37 | Bala Vikasa Kendra | Mundgod | 1969 | Smt. Sujata N.Harihar |
| | **OTHER SOCIAL SERVICE INSTITUTIONS** | | | |
| 38 | Thakkar Bapa Tailoring School | Ankola | 1956 | Shri R.V.Keni |
| 39 | Anandashram Tailoring School | Mundgod | 1969 | Smt. Sujata N.Harihar |
| 40 | Dinkar Kalaniketan Music School | Ankola | 1990 | - |
| 41 | Dinkar Kalaniketan Music School | Karwar | 1990 | - |
| 42 | Satyasai Balawadi & Balavikas Kendra | Kodibag, Karwar | 1985 | - |
| 43 | Computer Training Centre | Karwar | 1998 | Dr. M.H.Naik |
| 44 | Computer Training Centre | Dandeli | 1998 | Shri M.S.Lamani |